ಕಣವಿ ಕಾವ್ಯ ಸಂಪುಟ ೬

ನಗರದಲ್ಲಿ ನೆರಳು

ಚೆನ್ನವೀರ ಕಣವಿ



ನಗರದಲ್ಲಿ ನೆರಳು

ಚೆನ್ನವೀರ ಕಣವಿ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ನಂ. ೯, ರಮ್ಯ, ಗೋಕುಲಂ ಮೂರನೇ ಹಂತ, ಮೈಸೂರು

NAGARADALLI NERALU
A collection of poems

Written by
Chennaveera Kanavi

Published by
Talukina Venkaniah Smaraka Granthamale
9, 'Ramya, Gokulam Third Stage,
Mysore - 570 002

ಮೊದಲ ಮುದ್ರಣ : 1974

ಎರಡನೆಯ ಮುದ್ರಣ : 2009

Pages : 57 **Price : Rs. 30/-**

ಮುಖಪುಟ : ಸುಧಾಕರ ದರ್ಬೆ

ಅಕ್ಷರ ಜೋಡಣೆ : ಚೇತನ ಗ್ರಾಫಿಕ್ಸ್, ಮೈಸೂರು

ಮುದ್ರಣ : ಗುಡ್ ಟಚ್ ಪ್ರಿಂಟರ್ಸ್, ಮೈಸೂರು.

ಅರ್ಪಣೆ

ಕುವೆಂಪು

ಅವರಿಗೆ

ಕೃತಜ್ಞತೆ

'ಎರಡು ದಡ'—ಪ್ರಕಟವಾದನಂತರ ಕಳೆದ ಐದಾರು ವರ್ಷಗಳ ಅವಧಿಯಲ್ಲಿ ಬರೆದ ಕವಿತೆಗಳ ಸಂಕಲನವನ್ನು ಓದುಗರೆದುರು ಇಡಲು ಪ್ರೇರೇಪಿಸಿ, ತಾವೇ ವಿಶ್ವಾಸದಿಂದ ಪ್ರಕಟಿಸಿದ ತ.ವೆಂ.ಸ್ಮಾರಕ ಗ್ರಂಥಮಾಲೆಯ ಛಾಯಾಪತಿ—

ಈ ಕವಿತೆಗಳನ್ನು ಪ್ರತಿ ಮಾಡಿ ಅಚ್ಚಿಗೆ ಸಿದ್ಧಪಡಿಸಿದ ಈಶ್ವರ ಕಮ್ಮಾರ—

ಮುಖಚಿತ್ರ ಕಲಾವಿದ ಶಂಕರ ಪಾಟೀಲ—

ಇಲ್ಲಿನ ಕೆಲವು ಕವನಗಳನ್ನು ಈ ಮೊದಲು ಪ್ರಕಟಿಸಿದ ಪತ್ರಿಕಾ ಸಂಪಾದಕರು—

ಸಹೃದಯ ವಿಮರ್ಶಕರಾದ ಗೌರೀಶ ಕಾಯ್ಕಿಣಿ, ಶಂಕರಮೊಕಾಶಿ ಪುಣೇಕರ, ಶಾಂತಿನಾಥ ದೇಸಾಯಿ—

ಇವರೆಲ್ಲರಿಗೂ ಅತ್ಯಂತ ಋಣಿಯಾಗಿದ್ದೇನೆ.

— ಚೆನ್ನವೀರ ಕಣವಿ

'ಚೆಂಬೆಳಕು' ಕಲ್ಯಾಣನಗರ, ಧಾರವಾಡ-7

ಜೂನ್ ೧೯೭೪

ಕೃತಜ್ಞತೆಯ ನುಡಿ

ಹಿರಿಯರಾದ ಶ್ರೀ ತ.ಸು. ಶಾಮರಾಯರು ಪ್ರಾರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯನ್ನು ಅವರ ಪುತ್ರ ಶ್ರೀ ಟಿ.ಎಸ್. ಛಾಯಾಪತಿಯವರು ಕಳೆದ ನಾಲ್ಕು ದಶಕಗಳಿಂದ ಯಶಸ್ವಿಯಾಗಿ ಮುಂದುವರಿಸಿಕೊಂಡು ಬಂದು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುವುದಲ್ಲದೆ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' (೧೯೯೯) ಯನ್ನು ಪಡೆದ ಶ್ರೇಯಸ್ಸಿಗೂ ಪಾತ್ರರಾಗಿದ್ದಾರೆ. ಈ ಗ್ರಂಥಮಾಲೆಯಲ್ಲಿ ನನ್ನ ನಾಲ್ಕು ಪುಸ್ತಕಗಳು ಅಚ್ಚುಕಟ್ಟಾಗಿ ಪ್ರಕಟಗೊಂಡಿರುವುದನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿ ಕೊಳ್ಳುತ್ತೇನೆ.

ನನ್ನ ಸಮಗ್ರ ಕಾವ್ಯದ ಮೂರು ಆವೃತ್ತಿಗಳು ಪ್ರಕಟಗೊಂಡಿದ್ದರೂ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ದೃಷ್ಟಿಯಿಂದ ಬಿಡಿಕವನ ಸಂಗ್ರಹಗಳ ಪ್ರತಿಗಳೂ ಅವರಿಗೆ ಲಭ್ಯವಾಗುವದು ಪ್ರಯೋಜನಕರವೆಂದು ಭಾವಿಸಿ, ಸ್ವತಃ ಲೇಖಕರೂ ಆಗಿರುವ ಪ್ರಕಾಶಕ ಛಾಯಾಪತಿಯವರು ಪ್ರಸ್ತುತ ಮಾಲೆಯನ್ನು ಪ್ರಾರಂಭಿಸಿದ್ದಾರೆ. ಅದಕ್ಕೆ ತಕ್ಕ ರಕ್ಷಾಪುಟದ ವಿನ್ಯಾಸವನ್ನು ಸುಂದರವಾಗಿ ರಚಿಸಿಕೊಟ್ಟ ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಭೆಯವರಿಗೂ ಈ ಯೋಜನೆಯ ಮುಖ್ಯ ಪ್ರೇರಕರಾದ ಶ್ರೀ ಛಾಯಾಪತಿಯವರಿಗೂ ನನ್ನ ವಂದನೆಗಳು.

ಧಾರವಾಡ
೨೦ - ೯ - ೨೦೦೯

ಚೆನ್ನವೀರ ಕಣವಿ

ಪರಿವಿಡಿ



(ಭಾವಚಿತ್ರ: ಲಿಂಗರಾಜ ಪಾಟೀಲ, ವಿಂಡ್ಸರ್, ಕ್ಯಾನಡಾ)

ನಗರದಲ್ಲಿ ನೆರಳು

ಮಟ ಮಟ ಮಧ್ಯಾಹ್ನದಲ್ಲಿ
ನೆರಳು ಹುಡುಕುತ್ತ ಹೊರಟಿದ್ದೇನೆ.
ಹಿಡಿದ ಕೊಡೆಯೂ ಕಾದು
ಭಾರವಾಗಿ ಬೇಸರಾಗಿದೆ ಅದೂ.
ದಾರಿಯಿಕ್ಕೆಲಕು ತಣ್ಣಗೆ ಮೈಚಾಚಿ
ನಿಂತಿರುವ ಗಿಡದ ಟೊಂಗೆಗಳನ್ನು,-ಕೈಚಾಚಿ
ವಿದ್ಯುತ್ತಂತಿಗಡ್ಡ ಬರುತ್ತವೆಂದು
ಅಡ್ಡಾತಿಡ್ಡ ಕಡಿದುಹಾಕಿದ್ದಾರೆ.
ಒಪ್ಪೋರೆ ನೆರಳೊ ? - ಬಿದ್ದಿದೆ ಅಸಡ್ಡಾಳ ಮುಳ್ಳುಬೇಲಿಯ ಮೇಲೆ.

ಎಷ್ಟೋ ದಿನಗಳಿಂದ ಇಷ್ಟೆತ್ತರ ಬೆಳೆದು
ಸುತ್ತೆಲ್ಲ ಛತ್ತರಿ ಹಿಡಿದು
ಅಮರವಾಗಿದ್ದ ಮರಗಳನ್ನು
ಟ್ರಕ್ಕು ಬಂದು ಹಾಯುತ್ತವೆಂದು
ದನ ಬಂದು ನಿಲ್ಲುತ್ತವೆಂದು
ದಾರಿಯನ್ನೆಲ್ಲ ಇನ್ನಿಷ್ಟು ಅಗಲ ಮಾಡುತ್ತೇವೆಂದು
ಉದಾರಿಗಳು -
ಕಡಿದು ಸೌದೆ ಒಟ್ಟಿದ್ದಾರೆ.

ಅಲ್ಲಲ್ಲಿ ತೋಟದ ತುಂಬ ಬಾಬ್ ಕಟ್ ಮಾಡಿದ,
ಆದರೂ ಹೂಮುಡಿದ
ನಾನಾ ನಮೂನೆಯ ಕಮಾನಿನ ಗಿಡಬಳ್ಳಿಗಳು-
ನೆಲಕೆ ತೊನ್ನು ಹತ್ತಿದ ಹಾಗೆ ನೆರಳು.
ಉದ್ದಕ್ಕೂ ಚುರುಗುಡುತ್ತಿರುವ ಟಾರು ರೋಡು:
ಅದಕ್ಕೂ ಮೂಡುತ್ತವೆ ನೂರೆಂಟು ಕೋಡು.
ಹಾಯಿಸಿಕೊಂಡು, ದಬಾಯಿಸಿಕೊಂಡು
ನಿಭಾಯಿಸಿಕೊಳ್ಳುವುದೇ ನೆಟ್ಟಗೆ ದಾರಿ ಹಿಡಿದವರ ಪಾಡು.

ಸಣ್ಣವನಿದ್ದಾಗ-
ನಮ್ಮೂರ ಹೊರಗಿನ ಆಲದ ಮರದ ದಟ್ಟ ನೆರಳಲ್ಲಿ
ಗೋಲಿಯಾಡಿ, ಬೆರಳಿಗೆ ನೆತ್ತರು ಬರುವಂತೆ ಡೀಕಿ, ಡೀಕಿಸಿ
ಒಬ್ಬರಿಗೊಬ್ಬರು ತೆಕ್ಕಿ ಬಿದ್ದು, ಅಂಗಿ ಹರಿದು
ಅತ್ತಿದ್ದು, ಮತ್ತೆ ನಕ್ಕಿದ್ದು, ಸಂತೋಷ ಉಕ್ಕಿದ್ದು
ನೆನಪಾಗುತ್ತದೆ-
ಈ ನಗರದ ಸುಡುವ, ಸುತ್ತು ಬಳಸುವ, ಕತ್ತು ಹೊರಳಿಸುವ
ಕುತ್ತು ಒಡ್ಡುವ ದಾರಿಯಲ್ಲಿ
ಹೀಗೆ
ಮಂದಿಯ ನಡುವೆ
ನೆರಳು ಹುಡುಕುತ್ತ ನಡೆಯುವಾಗ.

ವಿನಾಯಕರಿಗೆ ವಂದನೆ

ತುಂಬಿದ ತಲೆಯ ಬೆಳ್ಳಿಗೂದಲಿಗೆ ಬೆರಳಾಡಿ
ಚಿಂತನೆಯ ಅಷ್ಟಪೈಲಿನ ಹರಳ ಹೊರಳಿಸುತ
ಅಂತಃಕರಣದಂಗ್ಯೆಯಲ್ಲಿ ತೂಗಿ, ಬದುಕ

ಬೆಲೆಗ್ಯೆವ: 'ಅದೇನದಲ್ಲ' ಅದೆಲ್ಲವ ಕೂಡಿ.
ಕನ್ನಡಕ ದಾಟಿ, ನುಣ್ಣಗೆ ಎದೆಯ ಮೀಟಿ, ಹದ

ಬರುವವರೆಗು ಮಿದಿಯುವ ದೃಷ್ಟಿ. ಸೂಟು ಬೂಟನು
ಕಳಚಿ, ಲಂಡಂಗಿ ಧೋತರದಿ ಮುಗುಳ್ನಗೆ ಹದನು.

'ಹಲೋ ಬರ್ರಿ': ತೆರೆಯುವದು ನಡುಮನೆಯ ಕಿಡಕಿ, ಕದ.
ಎಂಟು ದಿಕ್ಕಿನ ಗಾಳಿಗಲ್ಲಿ ಕಡಲಿನ ಹಾಡು,

ಮೂಡ-ಪಡುವಣ ನೆಳಲು-ಬೆಳಕಿನಲಿ ತೇಲುವರ—
ಸಂಚೆ, ಬಾಳ ದೇಗುಲದಿ ಸಮನ್ವಯ-ತೇರ

ಸಿಂಗಾರ, ಅರುವತ್ತರಲು ಭಾರಿ ಕಸರತ್ತು.
ಎತ್ತರದಲ್ಲು ಬಾಗಿ ಹತ್ತಿರ ಬರುವ ಮಹತಿ:
ಸಂಕ್ರಾಂತಿ: ಕೈಕುಲುಕಿದಂತೆ ದ್ಯಾವಾ-ಪೃಥಿವಿ.

ಕರಿಕಿ-ಕಣಗಿಲ*

ತೀರ ಎತ್ತರವಿರದ ದೇವಗಣಗಿಲ ಗಿಡದ
ಸುತ್ತು ನೀರುಂಡು ನಳನಳಿಸಿರುವ ಹಸಲೆ; ಎಳೆ
ಬಿಸಿಲ ಮಿಂದು, ಸಂತೃಪ್ತಿ-ಸುಳಿಗಾಳಿಯಲಿ ತಲೆ

ಯೊಲೆದು, ಮಾಸದ ಹಸುಗೂಸಿನಂತೆ ನಸುನಗುತ
ಕೊಂಬೆ ತುತ್ತುದಿಗೆ ಹಳದಿ-ಬಿಳಿ ಮಧುರ ಪಾಕದಿ

ಹೂವಿನಾರತಿಯ ಬಾನಿಗೆ ಹಿಡಿದು, ನಿರುಮ್ಮಳ
ನಿಂತ ರಸಿಕ: ಎಲ್ಲರಿಗೂ ನಿಲುಕುವ ಹಾಗೆ. ಒಳ-

ಹೊರಗೆ ತುಂತುಂಬಿ ಬರುವ ನಾದದ ತುಳುಕು, ಹದಿ-
ನೆಂಟು ಒಣ ಉಸಾಬರಿ ಇರದ ಮಾತು-ಮೈತ್ರಿಯ

ನಂಟು: ಗೆಂಟು ಗೆಂಟಿಗೆ ಒಡೆದ ನಾಲ್ಕಾರು ಎಲೆ-
ಚಿಗುರು; ನಿರಾಡಂಬರ ಟೊಂಗೆ, ಹೊಂಗೆಯ ಹಾಗೆ

ಹೂಂ ಎಂದು ಹೂಸುರಿದು ನೆಲವ ಮುಚ್ಚುವದಿಲ್ಲ.
ಕೆಳಗೆ ಕರಿಕಿ-ಪತ್ರಿಯ ಮೇಲೆ ಉದುರಿದ ಹೂವ
ಬೆರಳಿಂದೆತ್ತಿ ಮೂಸು: ಬೇಕಿಲ್ಲ ಹಾವ-ಭಾವ.

---

* ಡಾ।। ಡಿ.ಎಸ್. ಕರ್ಕಿಯವರಿಗೆ ಅರುವತ್ತು ತುಂಬಿದಾಗ

ಪಕ್ಷಿತಟಾಕ

ಮುಂಜಾವು—ಇಲ್ಲ—ಸಂಜೆ ಈ ಕೆರೆಯ ದೂರದಿ
ಕುಳಿತು ಕಣ್ಣೋಡಿಸುವೆ: ದಂಡೆ ಗಿಡಗಂಟಿಗಳ
ದುಂಡುಕಟ್ಟಿನಲಿ ಕನ್ನಡಿಯಾಗಿ, ಮೋಡಗಳ

ನಭದ ಚಿತ್ತಾರವನು ಬಿಡಿಸಿ ತರೆ ಹತ್ತಿರದಿ—
ರಾಮ ಚಂದ್ರಬಿಂಬವ ಹಿಡಿದು ಅಳುವ ನಿಲ್ಲಿಸಿ-

ದಂತೆ ನನಗೂ ವಿರಾಮ. ರೈಲು ಕಂಬಿಯ ಜೋಡು-
ಗೆರೆ; ಆಚೆ ಕೆಂಪು ಮೊಗವೆತ್ತಿರುವ ಕಾಲೇಜು.

ನೆನಪಿನ ಮೋಜು; ಹೊಗೆಯಾಡುವಿಟ್ಟಂಗಿ ಭಟ್ಟಿ.
ಕೊಕ್ಕರೆ, ಕಪ್ಪೆ, ಮೀನು; ಇರಬಹುದಲ್ಲೆ ಹಾವು.

ಜೋತಿರುವ ಗೀಜಗ ಗೂಡು; ಒಂದೆರಡು ಗೋವು.
ತೆರೆಗೆ ಬಂದೆರಗಿ ಹಾರುವ ಹಕ್ಕಿ ನಾಲ್ಕಾರು—

ಇದಕು ಸಾಕಷ್ಟು ಪರಿವಾರ; ಸನಿಹದಲಿ ಬೇವು
ಮಾವು. ಕೆರೆಯ ತುಂಬು ಬಾಳಿಗೆ ನೀರೆ ಜೀವಾಳ;
ಕೆಸರು–ಕ್ಲೇಶವ ಸಹಿಸಿ ತಿಳಿದಾಗ ಭಾವಮೇಳ.

ಅಂತರ*

ಇಂದು ಸ್ವಚ್ಛಂದದಲಿ ಸಿಳ್ಳು ಹೊಡೆಯುತ, ಹಳ್ಳು
ಒಗೆಯುತ್ತ, ಅವರಿವರ ಟೀಕಿಸಿ, ಮೇಜು ಗುದ್ದಿ,
ಮಾಲೆ ಹಾಕಿಸಿಕೊಂಡು, ಮರುದಿವಸವೇ ಸುದ್ದಿ

ಬಾರದಿರೆ ಪತ್ರಿಕೆಯ ಬೈಯುತ್ತ, ಬಿಳಿಸುಳ್ಳು-
ಗಳ ಕಳ್ಳು ಹೀರಿ ನಡುಬೀದಿಯಲಿ ಜೋಲಿ ಹೊಡೆ-
ಯುತ್ತ, ಝೂಂಡಾ ಒಗೆಯುವ ನಮಗೆ ಹೇಗೆ ತಲೆಗೆ
ತಾಗೀತು: ನಾವು ಹುಟ್ಟುವ ಮೊದಲೇ ಬಿಡುಗಡೆಗೆ

ಹುಟ್ಟು ಹಾಕುತ, ರಟ್ಟೆ ಮುರಿಯುವವರೆಗೆ ದಂಡೆ
ತಲುಪಿಸಿದವರ ನೋವು-ಕಾವು? ಮೂರು ಬಣ್ಣದ
ಬಾವುಟದಡಿಗೆ ನೂರು ಬಣ್ಣಗಳೆಲ್ಲ ಬೆಳ್ಳಗೆ
ಹೊಳೆದು, ಲಾಠಿ-ಗುಂಡಿಗೆ, ಬೂಟು ಮೊಳೆ ತುಳಿತಕ್ಕೆ

ಪುಟಿಗ ನೆತ್ತರು ಬರೆದ, ಬರೆಯಲಾರದ ಸಂಪದ.
ಪುಟ ತಿರುವಿದಂತೆ ಸ್ವರ್ಣ ಮಂದಿರದ ಬಾಗಿಲ
ಅಮೃತಸರದಲ್ಲಿ ಸಾವಿರದ ಕೆಂಪು ಕಮಲ.

---

* ಜಾಲಿಯನ್ ವಾಲಾಬಾಗ್ ದುರಂತ ಸ್ಮರಣೆ

ಮತ್ತೆ ಮಳೆ

ಸಳಸಳ ಜುಳು ಜುಳು ರಪರಪ
ತಪ ತಪ ತೊಯ್ದವು ಕೋಟು ಪ್ಯಾಂಟು;
ಒಳ ಅಂಗಿಯ ಒಳಗೂ, ಬೆನ್ನಿನ ಹುರಿಗುಂಟ
ಹರಿಯಿತು ತಣ್ಣಗೆ ಕರೆಂಟು.
(ಮಗುವಿನ ಕನಸಿಗೆ ಹಾಸಿಗೆ ಹಸಿ ಒದ್ದೆ.)

ಮೊದಲಿಗೆ ಹತ್ತೇ ಮುತ್ತಿನ ಹನಿ
ತುಟಿ ಸವರಿತು ಹೀಗೆ—
ತಟ ತಟಕು, ಗುಟು ಗುಟುಕು
ಕಿಟಕಿಯೊಳಿಂದಲೆ ನೋಡಿದೆ:
ನೆನೆನೆನೆದೂದುವ ಸಿಳ್ಳಿನ, ಹೊಗೆಯುಗುಳುವ ಬಂಡಿ.
ಈಚೆಗೆ ಉಗಿಹಾಯುವ ಬಿಸಿ ಬಿಸಿ ತಿಂಡಿ.
ಅಬ್ಬಾ ಈ ಥಂಡಿ !
ಪಂಚಮಿ ಹಬ್ಬದ ಉಂಡಿ, ಜೊತೆಯಲಿ ತುಪ್ಪದ ಗಿಂಡಿ.
ಶ್ರಾವಣ ಮುಗಿಯಲು ಚಿಗಿವುದು ಉದ್ದಾಗಿಹ
ಮುದ್ದಾಗಿಹ ಗಣಪತಿ ಸೊಂಡಿ.

ಆ ಗಿಡದಡಿ ಬಾಗಿದ ಬೀಗಿದ ಗಂಡು-ಹೆಣ್ಣು
ಮುದುಕರು, ಹುಡುಗರು, ತುಡುಗರು
ಆರಿಸಿಕೊಂಡರು ತುಂಟರು ರಸದುಂಬಿದ ನೀರಲಹಣ್ಣು,
ಅಲ್ಲೇ ಕಡಿದುಗುಳಿದ ಬೀಜ: ನಾಲಗೆ ಜಾಂಬಳಿ ತಾಜಾ.
ನೆನಪಿನ ಸುರುಳಿಯ ಬಿಚ್ಚುತ ಉರುಳಿದೆ
ಕಾಲುವೆಯಲಿ ಕೆಂಪಾಗಿಹ ಮಳೆ ನೀರು—
ಇಡ್ಲಿಯ ಮುಳುಗಿಸಿ ಬಿಟ್ಟಿದೆ ಕಮ್ಮಗೆ ಸಾಂಬಾರು.

ಎಣ್ಣೆ ಹಚ್ಚಿ ಎರೆದಂತಿದೆ ಉದ್ದಕು ಡಾಂಬರು ರಸ್ತೆ
ಸರ್ರನೆ ಜಾರಿವೆ ಕಾರು ತೆರೆಯೊಳಗಿನ ಮರಿಮೀನು.
ಮುಸುಗುಡುತಿದೆ ಸಿಟಿಬಸ್ಸು
ಒಳಗಿದ್ದವರಿಗೆ ಹೊರಗಿನ ಮಳೆಹನಿ ಛಂದಸ್ಸು.
ಕುಡಿದೇ ಹೊರಟಿದೆ ಟ್ರಕ್ಕು—ನಡುನಡುವೇ ಬಿಕ್ಕು,
(ನಡುಬೀದಿಗೆ ಮಲಗಿದ ನಾಯಿಗೆ ಏನೋ ಸ್ವರ್ಗದ ಕನಸು.)
ಈ ದಾರಿಗೆ ಹೊತ್ತವರಿಲ್ಲವೆ ಕಲ್ಲುಽಮಣ್ಣು?
ಪೆಟ್ರೋಲಿನ ಹನಿ ಹನಿ ಬರೆದಿವೆ
ಅಲ್ಲಲ್ಲಿಗೆ ನವಿಲಿನ ಗರಿ-ಕಣ್ಣು.

ಕೊಡೆ ಏರಿಸಿ ಹಿಡಿದವರು
ಕಚಲ್—ಪಚಲ್ ಯಾವುದೋ ಛಂದಕೆ ನಡೆದವರು
ಮುಖವೇ ಕಾಣದು, ತೊಯ್ದಿವೆ ನುಣ್ಣಗೆ ಮೊಣಕಾಲು,
ಹೊಯ್ದಾಡಿವೆ ನಿರಿಗೆಯ ಸಾಲು,
ಎಳೆ ಎಳೆಯಾಗುತ ಇಳಿಗಿಳಿದಿದೆ ಮುಗಿಲಿನ ಹೆಜ್ಜೇನು.
ವಿದ್ಯುದ್ದೀಪದ ಬೆಳಕೂ ತೊಯ್ದಿದೆ, ಎಲ್ಲಾ ಮಸಮಸಕು,
ಏನೋ ಬಾಯಿಗೆ ಬಂದಿತು, ಮರೆತೇಹೋಯಿತು ಜೋಕು.

ಹಚ್ಚನೆ ಹಸುರೆಲ್ಲವು ಬಂಗಾರದ
ಬಿಸಿಲನು ಹೊದ್ದು ಸಿಂಗಾರಾಯಿತು.
ತುಂಬಿದ ಕೆರೆ-ತೆರೆಯಲಿ ಕಚಕುಳಿ
ಹಕ್ಕಿಯು ಹಾರಿದ ರೆಕ್ಕೆಯ ಪಟಪಟ ಸದ್ದು,
ಹನಿಹನಿಗಳ ವರ್ತುಲ, ಅಂಚಿಗೆ ಅಲೆ ಅಲೆ ಮುದ್ದು.

ತಲೆ ಬಾಗಿಲದಲಿ ಕೊಡೆ ಇಳಿಸಿ, ಕಾಲೆಗೆ ಕಾಲೊರಸಿ
ಮೂಡಿವೆ ಹೆಜ್ಜೆ ಅಡುಗೆಯ ಮನೆವರೆಗು,
ಕುರ್ಚಿ, ಮೇಜು, ಟಾವೆಲ್ಲು, ಟಿಂಟಿಣಿಸುವ ಕಾಲ್‌ಬೆಲ್ಲು
ಅಣುರೇಣು ತೃಣ ಕಾಷ್ಠವು ಜುಣು ಜುಣು

ಕೆಂಡಕೆ ಕೈ ಕಾಯಿಸಿ ಕಾಫಿಯ ಗುಟುಕರಿಸು,
ಸುಟ್ಟಿಹ ಗೋವಿನ ಜೋಳದ ತೆನೆಗಾಳನು
ಮಕ್ಕಳ ಜೊತೆ ಮೆಲುಕಾಡಿಸು, ಅವರನು
ಕಾಡಿಸು, ಪೀಡಿಸು, ನಗಿಸು,
ಇದಕೆಲ್ಲಾ ಬೇಕಿಲ್ಲ ಯಾರ್‍ಯಾರದೊ ಶಿಫಾರಸು.

ಹಗಲೂ ಮಳೆ, ಇರುಳೂ ಮಳೆ
ಮಂದಗೆ ಸಂಧ್ಯಾಕಾಲ—
ಕನಸೂ ಮಳೆ, ನೆನೆದಿಹ ನೆನಸೂ ಮಳೆ
ಭೋರ್ಗರೆದಿವೆ ಒಳಗಿವಿಯಲಿ ದೂರದ ಹೊಳೆ-ದಿಡುಗು,
ಈಗಿಲ್ಲ: ಒಮ್ಮೆಲೆ ಹೊಮ್ಮುವ ಮುಂಗಾರಿನ ಗುಡುಗು.
ಈ ಬಾಳಿನ ಹಡಗು ಹೀಗೇ ಸಾಗಿದೆ, ಅದಕದರದೆ ಬೆಡಗು,
ಪ್ರಾಸಕ್ಕೇನೊ ಕೂಡಿತು ಡಗು—ಡುಗು
ಒಳಗಿಲ್ಲವೆ ನಡುಗು ?
ಹಾಗಿದ್ದರೆ
ಈ ಕವಿತೆಯನಲ್ಲೇ ಮಡಗು.

ಆಚೆ

ಅಣು-ಕಣಗಳ ವಿಭಜಿಸಿ ವಿಶ್ಲೇಷಿಸಿ ನೋಡುವ
　ಕನ್ನಡಿ ಈ ಕ್ಷಣ. ಅನುದಿನವೂ ಅನುಮಾನದ
　ಅವಶೇಷ. ದ್ವೇಷ-ವೇಷ-ಕ್ಲೇಶ ಸಂಕೀರ್ಣದ
ಮದ್ದಿನ ಕುಡಿಕೆಗೆ ಒಳಗೇ ಕೊಳ್ಳಿಯನಿಡುವ—
ಹಾರಿವೆ ಕಿಡಿವೂಗಳು ಬಿದ್ದಿದೆ ಬರಿ ಬೂದಿ.

　ಎತ್ತುವ, ಬಿತ್ತುವ, ತುತ್ತುವ ಕೈಗಳಿಗೆ ಸಿಗದು
　ಕೀಲಿಯ ಕೈ, ಗಾಳಿಗೆ ಗೋಣಾಡಿಸಿ ನಿಲ್ಲದು
ಒಂದೆಡೆ; ಒಂದೇ ಸಮ ಹುಡುಕುತ್ತಿದೆ ಹಾದಿ.
ಚಕ್ರದಿ ಅದೆ ಆಗಿದೆ, ನೂಕಿದೆ ಮತ್ತೊಂದು.

　ಹಗಲಿರುಳು, ಋತುಮಾನವು—ಶತಮಾನದ ಬಿಂದು.
　ಈ ಕ್ಷಣದಲಿ ತೂಗಿದೆ ತತ್ತರಿಸಿದೆ 'ಇಂದು'.
ಒಳಗೇ ಕತ್ತರಿಯಾಡಿಸಿ ಎಳೆಯುತ್ತಿದೆ 'ಮುಂದು'.
　ಏರಿಳಿಯಲು ಕಾದಿವೆ ಗಿರಿ-ಕಂದರ: ಅದರಾಚೆ
　ಕ್ಷಿತಿಜದ ಗೆರೆಯೆ ? ಬೆಳಕಿನ ತೊರೆಯೆ ? ಬರಿಮಿಂಚೆ ?

ಗಾಂಧಿ-ಶರದ್ಗೀತ

೧

ಬೆಳುಗಾಲದ ಬಿಸಿಲಿನಲ್ಲಿ ನಳನಳಿಸಿವೆ ಹೊಂದೆನೆ,
ಹೊಲ ತೋಟದ ಬೇಲಿಯಲ್ಲು ಎಲೆ-ಹೂಗಳ ವಂದನೆ.
ತಿಳಿಬಾನಿನ ತೆಳುನೀಲಿಗೆ ತಿಳಿಗೊಳವೇ ಚಂದನೆ
ಬೆಳುನಗೆಯನು ತುಳುಕಿಸುತ್ತ ಗಾಂಧಿ ನಡೆದು ಬಂದನೆ ?

೨

ಎರಡು ದಶಕವೆಲ್ಲ ಮಾಡಿ ಮುಗಿಸಿ-ಬಂತು ನೆನಪಿಗೆ
ಮನಮನಗಳ ದುರ್ಗಂಧವು ಮೂಸಿದಂತೆ ಸಂಪಿಗೆ,
ನೂರು ಸೋಲಿಗೂರುಗೋಲು: ಬನ್ನಿ ವಿಜಯ ದಶಮಿಗೆ-
ನೂರು ವರುಷಕೊಂದೆ ಹರುಷ ಸಾಕೆ ನಮ್ಮ ಪಾಲಿಗೆ ?

೩

ಮುಂಗಾರ್ ಬೆಳೆ ಮಾಗುತಿರಲು ಹಿಂಗಾರಿನ ಸಸಿಗಳು
ನವರಾತ್ರಿಯ ಸಿಂಗಾರಕೆ ತೆರೆದ ಎಳೆಯ ಕಂಗಳು
ಸ್ವಾತಿಹನಿಯ ಜಾತಿ ಮುತ್ತು ಬಿತ್ತಿಬೆಳಗಿ ಕಾರ್ತಿಕ
ಹಲಸು ಬಾಳೆ ಪೇರಲಗಳ ಫಲಭಾರದ ಕೌತುಕ.

೪

ಮಣ್ಣ ಹಣತೆಯಲಿ ಬೆಳಕಿನ ಕುಡಿಗಳು
ಮಿಡಿದಿವೆ ಬಾನಿಗೆ ಕೈಮುಗಿದು-
ಲಕ್ಷ ಕೋಟಿ ನಕ್ಷತ್ರದ ಗುಡಿಯಲಿ
ಗಾಂಧಿ ಚಿತ್ತವಿದೆ ಕಣ್ದೆರೆದು.

೫

ತಿಳಿ ಬೆಳುದಿಂಗಳ ಶಾಲನು ಹೊದಿಸಿದೆ
ಗಾಂಧೀ ಹುಣ್ಣಿಮೆ ಜನಪದಕೆ;
ಸೀಗೆ-ಗೌರಿ,- ಸೇವಂತಿಗೆ ದಂಡೆಯು-
ಆರತಿ ಬೆಳಗಿವೆ ಪ್ರತಿಪದಕೆ.

* * *

ಬೆಳುಗಾಲದ ಬಿಸಿಲಿನಲ್ಲಿ ನಳನಳಿಸುವ ಹೊಂದೆನೆ
ಹೊಲತೋಟದ ಬೇಲಿಯಲ್ಲು ಎಲೆ-ಹೂಗಳ ವಂದನೆ.

ಪದ್ಮಶ್ರೀ*

ಆಶೆಯ ಕಿರಣಗಳಾಡದ
ಕತ್ತಲೆ-ಮಡು.
(ಜಿಂಯ್‌ಗುಟ್ಟುತ ಜೇವೊಡೆದಿವೆ ರೋಗಾಣು)

ಮೆಲ್ಲಗೆ ಮೇಲೆತ್ತಿದೆ
ಕಾಣದ
ಕರುಣೆಯ ಕೈ—
(ನರಳುತ್ತಿದೆ ಜೀವಾಣು)
ಹತ್ತೂ ಬೆರಳಿಗೆ ಹೊತ್ತಿವೆ ಜೀವದ ಮೋಂಬತ್ತಿ.

ದೇಹದ ಯಂತ್ರಾಗಾರವ ಮಾಂತ್ರಿಕನೊಲು ಹೊಕ್ಕು
ಕೌಶಲ್ಯದ ಶಲ್ಯವನ್ನಾಡಿಸಿ ಕಶ್ಮಲವನು ಕಿತ್ತು
ಸಲಿಗೆಯ-ಹೊಲಿಗೆಯ ಬೆರಳಾಡಿವೆ ಅಲುಗಾಡದೆ ಚಿತ್ತ
ದಾಟಿಸಿ ಸಂದೇಹದ ಕುತ್ತು; ತೊಳಗಿಸಿ ಚೈತನ್ಯದ ಮುತ್ತು.

ಆ ಲೋಕದ ಸೂರ್ಯನ ಹೊಂಗಿರಣದ
ಹಿಂಗದ ಮೆಲು ನಗೆ ಸೂಸಿ
ಈ ಲೋಕದ ತಿರುಗಣಿ ಮಡುವಿನ
ನಡುವಿನ ಅಸ್ವಾಸ್ಥ್ಯವ ಸೋಸಿ,
ಬಿಡುವಿಲ್ಲದೆ
ಜೀವದ ದಲ ದಲ ದಲವರಳಿಸಿ
ಭರವಸೆ ತೋರಿದೆ ಬದುಕಿಗೆ
ಮುಂಜಾವದ ಪದ್ಮಶ್ರೀ.

---

*ಡಾ॥ ಆರ್. ಬಿ. ಪಾಟೀಲರಿಗೆ 'ಪದ್ಮಶ್ರೀ' ದೊರೆತಾಗ

ದೀಪಾವಳಿ

೧

ಅಲ್ಲಲ್ಲಿ ಹುಲ್ಲು ಹಳದಿಗೆ ತಿರುಗಿ, ಗದ್ದೆಯಲಿ ನೆಲ್ಲು ತೆನೆಹಾಯ್ದು
ಗಾಳಿಯುದ್ದಕು ಬಾಗಿ ಬಾಚುತ್ತ ಬಿಸಿಲಿನಲಿ ಮಿರಿ ಮಿರಿ ಮಿಂಚಿ;
ಆಕಾಶದಲ್ಲಿ ಸ್ವಾತಿಯ ಮೋಡ ಸುರಿದು ಹಿಂಜರಿದು
ಕ್ಷಿತಿಜದಂಚಿನಲಿ ಸಂಜೆಯ ಸೂರ್ಯ ಝಗಝಗಿಸಿ
ಅಲ್ಲೊಂದು ಇಲ್ಲೊಂದು ಚಿಕ್ಕೆ ಕುತೂಹಲದಿ ಕಣ್ಣು ತೆರೆದಾಗ
ಬೆಳ್ಳಗೆ ಮಂಜು ಮುಸುಕಿನಲಿ ಬಂತು ದೀಪಾವಳಿ.

೨

ಗೋದಿ ಸಸಿ ನಾಟಿ, ಜೋಳದ ತುಂಬುತೆನೆ ತಲೆದೂಗಿ
ಹುಚ್ಚೆಳ್ಳು ಹಚ್ಚಹಸುರಿಗೆ ಅಚ್ಚಬಂಗಾರದಂಚಾಗಿ;
ದನಕರುಗಳೆಲ್ಲ ಮೇದು ಮೆಲುಕಾಡಿಸುತ ಬರುವಾಗ
ಕೆರೆಯಂಚಿನಲ್ಲಿ ಸಾಲಾಗಿ ಕುಳಿತ ಬೆಳ್ಳಕ್ಕಿ ಬಾನಿಗೆ ಹಾರಿ,
ನಸುಗಪ್ಪಿನಲ್ಲಿ ತೊಗಲಬಾವಲಿ ಹಿಂಡ ಹಿಂಬಾಲಿಸುತ
ಮನೆಮನೆಯ ಶಿವನಬುಟ್ಟಿಗೆ ಇಳಿದು ಬಂತು ದೀಪಾವಳಿ.

೩

ನೆಲದ ಹುಲ್ಲಿನ ಮೇಲೆ ಮುಗಿಲ ಮಲ್ಲಿಗೆ ಜಗುಳಿ,
ಹೊನ್ನವರೆ, ಅಡಿಕೆ, ಗೊರಟಿಗೆ, ಚೆಂಡು ದುಂಡಗೆ ಅರಳಿ,
ಬೇಲಿಗುಂಟ ಬಿಳಿ, ಹಳದಿ, ಕೆಂಪು, ಜಾಂಬಳಿ, ನೀಲಿ ಹೂಗಳ ಮೇಲೆ
ಕುಳಿತ ಪಾತರಗಿತ್ತಿ ಬೆಂಬತ್ತಿ ಮಕ್ಕಳಾಡಿರಲು,
ನೂರು ಸಲ ಗುಬ್ಬಿ ಗೂಡಿಗೆ ಮರಳಿ ಗುಟುಕಿಡಲು
ಅಕ್ಕರತೆಯಲಿ ಮರಿಗೆ ರೆಕ್ಕೆ ಮೂಡಿಸಿ ಬಂತು ದೀಪಾವಳಿ.

೪

ಸಂದಿಗೊಂದಿಯ ಕಸ-ಧೂಳಿ-ಜೊಂಡಿಗ—ಜೇಡಬಲೆ ಗುಡಿಸಿ
ಸುಣ್ಣಬಣ್ಣವ ಹಚ್ಚಿ, ಹಳೆಯ ತಲೆದಿಂಬಿಗೆ ಹೊಸ ಚೀಲ ತೊಡಿಸಿ,
ಹರಕು-ಮುರುಕು ಸಾಮಾನುಗಳ ಗಂಟುಕಟ್ಟಿ ಮೂಲೆಗೆ ಇರಿಸಿ,

ಸ್ನೇಹಿತರ ಬಳಗಕ್ಕೆ ರೇಡಿಮೇಡ್ ಶುಭಾಶಯವ ಕಳಿಸಿ,
ವಿಶೇಷ ಸಂಚಿಕೆಯ ಮುಖಪುಟದಲ್ಲಿ ಹೆಣ್ಣಿನ ವಿಚಿತ್ರ ಭಂಗಿ ಕಂಡಾಗ
ಮುಸಿ ಮುಸಿ ನಕ್ಕು, ಇದ್ದುದರಲ್ಲೆ ಖುಶಿಯಾಗಿ ಬಂತು ದೀಪಾವಳಿ.

೫

ಹೊಲ, ಗದ್ದೆ, ಗಿರಣಿ, ಕಚೇರಿ ಕಾರ್ಖಾನೆಯಲಿ ಬೆವರು ಸುರಿಸಿ,
ಸಂಪು, ಹರತಾಳ, ಕೊಲೆ, ಸುಲಿಗೆ, ಅಪಘಾತ ರಕ್ತಕುಂಕುಮವಿರಿಸಿ,
ವಿಧಾನಸಭೆಯ ವಿಧಿಯಿರದ ಗೊಂದಲದೊಳಗೆ ಸಿಕ್ಕು ಪಾರಾಗಿ
ಪಕ್ಷಾಂತರಕ್ಕೆ ಮನಸೋಲದೆ ತನ್ನ ಹಾದಿಯ ತಾನು ಹಿಡಿದು—
ಕಲ್ಲಿನೇಟಿಗೆ ಎಲ್ಲ ವಿದ್ಯುದ್ದೀಪ ಒಡೆದು ಚೂರಾಗಿರಲು
ಹಣತೆಗಳ ಹುಡುಹುಡುಕಿಕೊಂಡು ಬಂತು ದೀಪಾವಳಿ.

೬

ಹಲವಾರು ಸಲ ಮಾವನಮನೆಗೆ ಬಂದ ಅಳಿಯನಂತೆ
ಭೆಟ್ಟಿಯಾದಾಗೊಮ್ಮೆ 'ಚಹ ಕುಡಿಸಪಾ' ಎನುವ ಗೆಳೆಯನಂತೆ
ದಿನ ದಿನವು ಪತ್ರಿಕೆಯಲ್ಲಿ ಬರುವ ವಾಚಕರ ಪತ್ರಗಳ ದೂರಿನಂತೆ
ಹೊಸ್ತಿಲ ತೊಳೆವ ಮೊದಲೆ ಬಾಗಿಲಲಿ ಸಪ್ಪಳಾಗುವ ಹಾಲಿನ ಬಾಟ್ಲಿಯಂತೆ
ಬಹುದಿನದ ಮೇಲೆ ಬಂದ ಕವನಸಂಕಲನದ ತಿದ್ದಿದೆರಡನೆಯ ಆವೃತ್ತಿಯಂತೆ
ಬರುವ ಕಾಲಕ್ಕೆ ಬಂತು ದೀಪಾವಳಿ.

ಚೈತನ್ಯ ತ್ರಿಕೂಟ*

ಪೂರ್ವದ ಅಪೂರ್ವ ಸಂಸ್ಕೃತಿಯ ಗೋಪುರವನೆ-
    ರಡು ತೋಳಿನಲಿ ಎತ್ತಿ, ಇತಿಹಾಸದಿತಿಮಿತಿಯ
    ಹಾಯ್ದು, ಕಾಲದೊಡಲಿನ ಬಾಳ ಸಂಘರ್ಷಣೆಯ
ಬೆನಕವಾಗುತ ಕನಕ, ವಜ್ರ, ವೈಡೂರ್ಯ, ತೆರೆ-
ಮರೆಯ ಮಳಲ ಹೊರಚೆಲ್ಲಿ, ಇಲ್ಲಿ ಪಶ್ಚಿಮಕೆ
    ಒಲಿದಳು ತುಂಗಭದ್ರೆ; ಉತ್ತುಂಗ ಶಿಲ್ಪದಲಿ
    ಮುಕ್ತೀಶ್ವರನ ಪೂಜೆ, ವೀರಭದ್ರನ ಓಜೆ.
ಚೌಡಯ್ಯ ಹುಟ್ಟು ಹಾಕುವನು ಎರಡೂ ದಡಕೆ.
ನೂತನ ಪುರಾತನಕೆ ತೇರನೆಳೆಯುವ ದಾರಿ
    ತೆರೆದು, ಸಂಕ್ರಾಂತಿ ಸಂಭ್ರಮದಿ ಹಳ್ಳಿ ಒಡಮುರಿ
    ದೆದ್ದು ದುಡಿದು, ಶಿವದೇವರಿಗೆ ಹಡದಿ ಹಾಸಿ,
ಸಂಜೆಗೆ ದೀಪ ಹಚ್ಚುವುದವರ ಹೆಸರು ಹೇಳಿ.
    ಇವರೆ ಸುಳಿವ ಶಾಸನ, ತಿಳಿವ ಹರಡುತ ಬಾಳಿ-
    ಗುತ್ಸಾಹ ತುಂಬುವರು:   ಎಲ್ಲರ ಕುಶಲಕೇಳಿ.

---

* ತುಂಗಭದ್ರೆ—ಚೌಡಯ್ಯದಾನಪುರ-ಶಿವದೇವರು

ಕೃತಾರ್ಥ

ಹೇಗೊ ಹೇಗೋ ಸುತ್ತಿ, ಬಳಸಿ
ಅಟ್ಟದ ಮೇಲೆ ಹತ್ತಿ, ಪಟ್ಟಾಗಿ ಕುಳಿತವರು,
ಅಂತರಿಕ್ಷವೆ ಸುರಕ್ಷಿತವೆಂದು ಮಣ್ಣ ಸಂಪರ್ಕವಿಲ್ಲದೇ ಮೊಳೆತವರು.
ಆಡಿದ್ದೆ ಆಡಿ, ಮಾಡಿದ್ದೆ ಮಾಡಿ
ಹಾಡಿದ್ದೆ ಹಾಡುವುದರಲ್ಲಿ ಮೈ ಮರೆತವರು.
ಎಲ್ಲಾ ಬಗೆಯ ನಗೆಯ ಕಂಪೊಗೆವಲ್ಲಿ ನುರಿತವರು.
ಅವರಿಗೇನಿದೆ ಚಿಂತೆ ?
ನೋಡುತ್ತಾರೆ ಒಮ್ಮೊಮ್ಮೆ ಕೆಳಗೆ:
ಭೂಮಿತಾಯಿಯ ಮೇಲೆ ಕೃಪೆ ಮಾಡಿದಂತೆ.
ಕುಟ್ಟುತ್ತಾರೆ, ತಿರುತಿರುಗಿ ಬೀಸುತ್ತಾರೆ
ಮಸಾಲೆ ಅರೆಯುತ್ತಾರೆ
ತಲೆಯ ಮೇಲೆ.
ಎಲ್ಲೆಲ್ಲಿಯದೊ ಸಿಟ್ಟು ತಂದು ಕತಕತ ಕುದಿಸುತ್ತಾರೆ
ಒಳಗೆ ಒಲೆಯ ಮೇಲೆ.
ಕೆಮ್ಮಿ ಕ್ಯಾಕರಿಸಿದರೆ ಮೈ ಜುಮ್ಮುದಟ್ಟುತ್ತದೆ
ಯಾರಿಗೋ ಅಭಿಷೇಕವೆಂದು.
ಹಗಲು ಹೊತ್ತಿನಲಿ ಹತ್ತುದನಿಗಳ ಕೂಡ ಹನ್ನೊಂದು
ರಾತ್ರಿ ನಿದ್ರೆ ಹತ್ತುವವರೆಗು ಇವರೇ ದೀನಬಂಧು.
ಬೆಳಗಾಯಿತೋ—
ಕಿಟಕಿ-ಬಾಗಿಲಿನಿಂದ ಹೊರಗೆ ಚೆಲ್ಲುತ್ತಾರೆ:
ಕಸ-ಕಡ್ಡಿ, ಹಾಳೆ, ಹಣ್ಣಿನ ಸಿಪ್ಪೆ, ಸುಡುಗಾಡು ಶುಂಠಿಯ ಕೊಂಬು.
ಎಮ್ಮ ಮನೆಯಂಗಳದಿ ಬೆಳೆಯುವದು ತಿಪ್ಪೆ.
(ಇದು ಅವರ ತಪ್ಪೆ ?)
ಅತ್ತಿತ್ತ ನೋಡಿ, ಯಾರೂ ಕಾಣುವದಿಲ್ಲವೆಂದಾಗ
ಅವರನುಗ್ರಹಿಸಿದಮೂಲ್ಯ ಬದುಕನ್ನೆಲ್ಲ ಒಂದೂ ಬಿಡದಂತೆ ಬಳಿದು
ಬೇಲಿಯಾಚೆಗೆ ಒಗೆದು
ಕೈ ತೊಳೆದು
ಕೃತಾರ್ಥನಾಗುತ್ತೇನೆ—
ಇಲ್ಲ?: ಅಪಾರ್ಥಕೆಡೆಯಾಗುತ್ತೇನೆ.

ಕುಟುಂಬ ಸೌಖ್ಯದ ಅಖ್ಯಾನ

೧

ಜನ ಜನ ಜನ
ಸಂತೆ-ಸಿನಿಮಾ, ಜಾತ್ರೆ-ಯಾತ್ರೆ, ಸಭೆ-ಸಮ್ಮೇಳನ
ಬಿಟ್ಟರೂ—
ರೈಲು ಬಸ್ಸು ಬುಸ್ಸೆನ್ನುತ ಹೊತ್ತಿಗೆ ಕೈ
ಕೊಟ್ಟರೂ
ನಾವು ನೀವು, ಅವರು ಇವರು, ಉಳಿದವರೇ ಎಲ್ಲರು;
ಅಲ್ಲು ಇಲ್ಲು ಸಲ್ಲರು.
ಎಲ್ಲಿ ಹೋದರಿಲ್ಲ ಜಾಗ, ಹೂಂ ನಡೆಯಿರಿ ಬೇಗ ಬೇಗ
ಹಾದಿಯಿರಲಿ, ಇಲ್ಲದಿರಲಿ ಸಾಗಿದ್ದೇ ಪಯಣ
ಎಲ್ಲಿಗೆಂದು ಕೇಳಬೇಡಿ, ಮುಟ್ಟಿದ್ದೇ ತಾಣ.
ಜಾಣರಂತೆ ನುಡಿದು ಹೀಗೆ ಗುಡಿ ಗೋಪುರ ಕಟ್ಟಬಹುದು
ಆಶ್ವಾಸನೆ ಧೂಪ ದೀಪ ದಿನದಿನವೂ ಬೆಳಗಬಹುದು
ಬರಿ ಮಾತಿನ ಗಂಟೆ ಬಡಿದು ಅಡ್ಡ ಬಿದ್ದು ಏಳಬಹುದು;
ಯಾವ ಮೂರ್ತಿ-ಮುಖದ ಮೇಲೆ ಸುಖದ ಬೆಳಕು ಕಂಡಿದೆ?
ತಪ್ಪದಂತೆ ಮೂರು ಹೊತ್ತು ಎಣ್ಣೆ ಮಾತ್ರ ಉಂಡಿದೆ.

ಕಾಣುತಿಹೆನು ದಿನ ದಿನವು:
ಹುಸಿನಗುವಿನ ದೆಸೆಯಿಲ್ಲದ ಹಸಗೆಟ್ಟಿಹ ಮುಖಗಳು
ನಿಟ್ಟುಸಿರಿನ ತಿದಿಗಳಲ್ಲಿ ಜ್ವಲಿಸದಂಥ ಎದೆಗಳು.
ಅರಿವಿಲ್ಲದೆ ಹೊರೆಯಾಗಿವೆ ಮಕ್ಕಳು-ಮರಿ ಒಕ್ಕಲು:
ಹುಣಿಸೆಯ ಹೂವೆಷ್ಟೊ ಉದುರಿ ಜೋತಾಡಿವೆ ಕಾಯ್ಗಳು.
ಹೊಟ್ಟೆಯಂಥ ವೈರಿಯಿಲ್ಲ, ರೊಟ್ಟಿಯಂಥ ಮಿತ್ರರು:
ರಟ್ಟೆಯಲ್ಲಿ ಕಸುವಿಲ್ಲದೆ ಬೀದಿಯಲ್ಲಿ ದೂಡುತಿಹರು ದಿನದ ಜೀವ ರಥವನು.
ದುಡಿಮೆ ಸಿಗದ ಕೈಗಳೆನಿತೊ ತುಡುಕುತಿಹವು ಏತಕೊ
ಗಾಳಿಗುದ್ದಿ ಮೈ ನೋಯಿಸಿ, ತಲೆ ಕಾಯಿಸಿಕೊಂಡಿವೆ.
ತಪ್ತವಾದ ಸಿಡಿಮದ್ದಿನ ಕುಡಿಕೆಯಂತೆ ಕಂಡಿವೆ.

ಹೊಲ ತುಂಬ ಸಿಕ್ಕಂತೆ ಬೀಜ ಚೆಲ್ಲಿದರೆ ಬರುವುದೆಲ್ಲ ಬೆಳೆಯಲ್ಲ, ಕಳೆ,
ಎಡೆಬಿಡದೆ ಸುರಿದರೆ ಮಳೆ: ಹರಿಯುವದು ಹುಚ್ಚು ಹೊಳೆ.
ಕೊಚ್ಚಿ ಹೋಗುವವು ಎರಡೂ ದಡದ ಮನೆ ಮಾರು.
ಬರಿ ಬಿರುಗಾಳಿ ಬೀಸಿದರೆ ತರಗೆಲೆಯಾಗಿ ಹಾರುವದು ನೆಲದ ಬದುಕು.
ನಿಸರ್ಗ ಸ್ವಚ್ಛಂದದಲಿ ಮೇರೆ ಮೀರಿದರೂ
ಅದರಂತರಂಗದಲಿ ಸೃಷ್ಟಿ ನಿರ್ಮಾಣ ನಿಯಂತ್ರಣ ಮಂತ್ರವಿದೆ;
ಋತುಋತುವಿಗೊಂದು ಸಮಧಾತುವಿನ ಸಮಾಂತರ ಛಂದವಿದೆ
ಹುಟ್ಟು-ಸಾವಿನ ನಡುವೆ ಬಾಳು ಹಿಡಿದಿಟ್ಟ ಸೇವೆ ತ್ಯಾಗದ
ಸೇತುಬಂಧವಿದೆ
ನೆಲದ ಸಂಯಮದಲ್ಲಿ ಮುಗಿಲಿನ ಕಾಂತಿ ನೂರ್ಮಡಿಸಿದೆ.

ಕಾಡಿಗೆ ಕಾಡೇ ಬೆಳೆದು ಜಿಂಯ್‌ಗುಟ್ಟುತ್ತಿದ್ದರೂ
ಬೇಕಾದಷ್ಟು ಕಡಿದು ನಡುವೆ ನಾಡು ಹೊಡೆಬೀಕ್ಕಿವೆ.
ಎಷ್ಟು ಬೇಕೋ ಅಷ್ಟು ಹೂ ಗಿಡಗಳ ನೆಟ್ಟು ನೀರುಣಿಸಿದರೆ
ತೃಪ್ತಿ; ಮನೆಯಂಗಳದ ವ್ಯಾಪ್ತಿ ಕಂಗೊಳಿಸದೆ ?

ಆರ್ಥಿಕ ತಳಹದಿ; ಅದರಷ್ಟಕೆ ಎದೆಗುದಿ.
ಅಭ್ಯುದಯದ ಕಟ್ಟಡ ಬಿತ್ತರಿಸಿ, ಮಹಡಿಗೆ ಮೇಲೇರಲು
ಸಾಮಾಜಿಕ ಸಂಬಂಧವನೆತ್ತರಿಸಿ
ಗಾಳಿಗೆ ಬೆಳಕಿಗೆ ಎಷ್ಟೊ ಅಷ್ಟೆ ಬಾಗಿಲು ಕಿಡಕಿಯು ಹಚ್ಚಿ,
ಸೂರ್ಯನ ಚಂದ್ರನ ಉದಯಾಸ್ತಕೆ ಹೃದಯವ ಬಿಚ್ಚಿ
ನಡುಮನೆಯಲಿ ಗದ್ದಲವಿಲ್ಲದೆ ಇಬ್ಬರೊ ಮೂವರೊ ಮಕ್ಕಳ
ಅಳು-ನಗುವಿನ ಜೊತೆ ಮನವನು ಮೆತ್ತಗೆ ಮಿದ್ದಿ,
ಬದುಕನು ಹದಗೊಳಿಸುವ ಪುಣ್ಯ ಯಾರಿಗೆ ಬೇಡಾ ಬುದ್ಧಿ ?
ಎಷ್ಟೋ ಜನರಿಗೆ ಅದು ಬರಿ ದಿನ ಪತ್ರಿಕೆ ಸುದ್ದಿ.

೩

'ಹತ್ತು ಹಡೆವುದಕಿಂತ ಒಂದು ಮುತ್ತು ಹಡೆವುದು ಲೇಸು'.
ಒಪ್ಪುತ್ತೇನೆ: ಮಂದಿಗೆ ಹೇಳಲು ಚೆನ್ನಾಗಿದೆ ಗಾದೆ—
ನಮಗೇನೂ ಕಡಮೆಯಿಲ್ಲ ತಗಾದೆ,
ಪಡೆದದ್ದೆಲ್ಲಾ ಮುತ್ತೇ ಆಗಿದ್ದರೆ ಆ ಮಾತೇ ಬೇರೆ.
ಜೊತೆಗೆ ಕೆಂಪು ಹವಳವು ಇದ್ದರೆ ಹೇಗೆ ? ಎನ್ನುತ್ತದೆ ತಾಳಿ.
ತಾಳುವ ತಾಕತ್ತಿದ್ದರೆ ಬಾಳಿ.

ಹಾಗೆ ನೋಡಿದರೆ—
ನಮ್ಮ ಯೋಜನೆಗಳೆಲ್ಲ ಸ್ವಲ್ಪ ನಿದಾನ;
ಯೋಚನೆಮಾಡುವದಂತೂ
ಅದಕ್ಕೂ ನಿದಾನ, ಗಡ್ಡಕ್ಕೆ ಬೆಂಕಿ ಹತ್ತಿದ ಮೇಲೆ
ಬಾವಿಯ ತೋಡುವ ಜನ.
ಅದಕ್ಕೇ ಇಂದು ಎಲ್ಲಿ ನೋಡಿದರೂ ಕಣ್ಣು ತಿವಿಯುತ್ತಿದೆ
ಕೆಂಪು ತ್ರಿಕೋನ.
ನೋಡಿಯೂ ನೋಡದಂತಿದ್ದರೆ ನಮಗೇ ಅವಮಾನ.
'ಬ್ರಹ್ಮದೇವನಿಗು ಬಿಡುವಿಲ್ಲ
ಯಮದೇವನಿಗೂ ತಡವಿಲ್ಲ'.
ಮಹಾದೇವನು ಮಾತ್ರ ಗೌರಿಯೊಡನೆ ನಸುನಗುತ್ತ
ಗುಹ-ಗಣಪತಿ ಇಬ್ಬರ ಜೊತೆಗೂಡಿ
ಲಕ್ಷಣವಾಗಿ ಹೇಗೆ ಕುಳಿತಿದ್ದಾನೆ ನೋಡಿ:
ಮಾತು ಗದ್ಯಕ್ಕಿಳಿಯಿತೆಂದು ಬೇಸರಪಡಬೇಡಿ
ಪದ್ಯದಲ್ಲೂ ಹತ್ತು ಕಟ್ಟುವ ಕಡೆಗೆ ಒಂದು ಮುತ್ತು ಕಟ್ಟುವುದುಂಟು;
ಹಾಗಿದ್ದರೇನೆ ಅದಕ್ಕೆ ಬೆಲೆಯುಂಟು.

ಮೂಲವಸ್ತು

ಬೇವಿಗೂ ಹೂವುಂಟಲ್ಲ—
ಅದರೊಡನೆ ಬೆಲ್ಲ, ಪುಟಾಣಿ, ಕೊಬ್ಬರಿ
ಕೂಡಿಸಿ ಕಹಿ ಕಡಿಮೆ ಮಾಡಿಕೊಂಡು
ತಿನ್ನುತ್ತೇವೆ: ಸಂವತ್ಸರದ ಪ್ರಾರಂಭಕ್ಕೆ.
ಕೊನೆಗೆ ಅನ್ನುತ್ತೇವೆ:
ಮೂಲವಸ್ತು ಬೇವು, ಜೊತೆಗೆ ಕೊಂಡು
    ತಂದದ್ದು ಬೆಲ್ಲ-
ದುಃಖ ಸುಖದ ಕ್ರಮವೂ ಹೀಗೆಯೇ ಏನೊ
    ಯಾವ ಬಲ್ಲ.

ಅವಲೋಕನ

ಎಷ್ಟು ಬೇಗ ಬೇಗ ಓಡುತ್ತವೆ ದಿವಸಗಳು,
ಕಣ್ಮುಚ್ಚಿ ತೆರೆಯುವಷ್ಟರಲ್ಲೇ ಮುಳುಗುತ್ತದೆ ತಿಂಗಳು.
ನೋಡ ನೋಡುತ್ತಲೇ ಕ್ಯಾಲೆಂಡರು ಮುಗಿದು
ಉರುಳುತ್ತದೆ ಇಡೀ ವರುಷ: ಜಾರುವ ಮರಳು.
ಇರುಳು ಚಾಪೆ ಹಾಸುತ್ತಲೇ ಬರುತ್ತದೆ,
ಹಗಲು ಸುತ್ತಿ ಸುರುಳಿ ಮಾಡುತ್ತಲೇ ಇರುತ್ತದೆ;
ನಿದ್ದೆಯಲ್ಲೂ ಅರ್ಧಕ್ಕರ್ಧ ಕನಸು: ಎಲ್ಲ ಮರೆತು ಹೋಗುತ್ತದೆ.

ಗುಬ್ಬಿ

ಗೋಡೆಗೆ ತೂಗು ಹಾಕಿದ ಫೋಟೋದ ಹಿಂದೆ
ಗುಬ್ಬಿ ಗೂಡು ಕಟ್ಟಿದೆ,
ಹುಲ್ಲು, ಹತ್ತಿಯ ಚೂರು, ದಾರ ಮೆತ್ತಗೆ ಒಟ್ಟಿದೆ.
ಈ ಪುಕ್ಕಲು ಪ್ರಾಣಿಯ ಧೈರ್ಯಕ್ಕೆ
ಬರೀ ಎರಡು ರೆಕ್ಕೆ.
ಅಡಿಗೆಯ ಮನೆಗೂ ಬಂದು ಕುಟುಕುತ್ತದೆ
ಅನ್ನದ ಅಗಳು—
ಬರ‍್ರನೆ ಹೊರಗೆ ಹಾರಿ, ಆರಿಸಿ ಹುಲ್ಲಿನ ಹುಳು
(ಈ ಶಾಕಾಹಾರಿ)
ಸರ‍್ರನೆ ಬರುತ್ತದೆ ಮರಳಿ, ಮರ-ಮರಳಿ.
ಕಿಟಕಿಯ ಸರಳಿಗೆ ಕುಳಿತು, ಚಕಮಕ ಹೊರಳಿ
ತೂರಿಬಂದು, ಚಿಂವ್ ಚಿಂವ್ ಮರಿಗೆ ಗುಟುಕಿಟ್ಟು,
ಹಾರಿ ಹೋಗುತ್ತದೆ, ಹೀಗೆ ಎಷ್ಟೋ ಬಾರಿ.

ಗುಬ್ಬಿಯ ಪುಟ್ಟ ಆಕೃತಿ
ಮರೆಯಾಗಿ,
ತಾಯಿಯ ವಿಶಾಲ ಹೃದಯದಲ್ಲಿ
ಕರಗಿ
ಹೋಗುತ್ತೇನೆ ನಾನು ಜೀವಂತವಾಗಿ.

ಬಂಗ್ಲಾದೇಶ

ಸುಟ್ಟು ಸೂರೆಗೊಳಿಸಿ ಬೂದಿಯಾಗಿಸಬಲ್ಲ ದೇಶವಲ್ಲ ನಾನು,
ಕೆಡವಿ ಉರುಳಿಸಬಲ್ಲ ಗೋಡೆಯಲ್ಲ—
ಇಲ್ಲ, ಒರೆಸಿ ಬರೆಯಬಲ್ಲ ಗಡಿ-ಗೆರೆಯಲ್ಲ.
ನಿನ್ನೆದುರು ಮೇಜಿನ ಮೇಲೆ ಹರವಿಕೊಂಡು ಕುಳಿತಿರುವ
ಜಗತ್ತಿನ ಆ ಹಳೆಯ ರದ್ದೀ ನಕಾಶ
ಅಂಕುಡೊಂಕು ಗೆರೆಗಳ ಬರಿಯ ಚಕ್ರವ್ಯೂಹ.
ಈ ಸೊಟ್ಟಾಪಟ್ಟೆ ರೇಖೆಗಳ ನಡುವೆ
ಎಲ್ಲಿ ಹುಡುಕಬಲ್ಲೆಯೊ ನನ್ನ ನೀನು ?
ಆಕ್ರಮಣಕ್ಕೆ ತುತ್ತಾಗಿ ಬಿದ್ದವರ ಉದ್ವೇಗ ನಾನು.
ಬಲಾತ್ಕಾರದ ತುಳಿತಕ್ಕೆ ಸಿಕ್ಕು ಸತ್ತುಹೋಗದ,
ಸಾವಿಲ್ಲದ ಕನಸು.
ನರನೊಬ್ಬ ಮತ್ತೊಬ್ಬ ನರನ ನೆತ್ತರು ಹೀರುವಾಗ—
ಸ್ವಾರ್ಥ, ಶೋಷಣೆ ಮಿತಿಮೀರಿದಾಗ
ಕ್ರೂರ ದಬ್ಬಾಳಿಕೆಯು ಮತ್ತೇರಿ ಕುಣಿಯುವಾಗ
ಅಕಸ್ಮಾತ್ತಾಗಿ ಮುಖವೆತ್ತಿ ನಿಲ್ಲುತ್ತೇನೆ—
ಯಾವುದೊ ಮೂಲೆಯಿಂದ,
ಪುಟಿದು ಮೇಲೇಳುತ್ತೇನೆ ಯಾರದೊ ಹೃದಯದಿಂದ.
ನೀನು ಈ ಮೊದಲು ನನ್ನ ಕಂಡಿರಬೇಕು:
ಕೆಲವೊಮ್ಮೆ ಪೂರ್ವದಲಿ, ಕೆಲವು ಸಲ ಪಶ್ಚಿಮದಿ
ಕೆಲವೊಮ್ಮೆ ನಗರಗಳಲ್ಲಿ, ಹಾಗೆಯೇ ಹಳ್ಳಿಗಳಲ್ಲಿ,
ಮನೆ-ಮಠಗಳಲ್ಲಿ ಮತ್ತೆ ಕಾಡಿನಲ್ಲಿ—
ನನಗಿರುವುದು ಇತಿಹಾಸ ಮಾತ್ರ, ಇಲ್ಲ ಭೂಗೋಲ.
ಇಂಥ ಇತಿಹಾಸ ಕಲಿಸುವದಕ್ಕೂ ಇಹುದು ನಿರ್ಬಂಧ—
ಓದುತ್ತಾರೆ ಜನರು ಕದ್ದು-ಮುಚ್ಚಿ:
ಕೆಲವು ಸಲ ಗೆದ್ದವನು, ಸೋತಿದ್ದೇನೆ ಹಲವು ಸಲ,

ನನ್ನ ಕೊಲೆ ಮಾಡಿದವರನ್ನೇ ಕೊಂದಿದ್ದೇನೆ ಕೆಲವೊಮ್ಮೆ
ಮತ್ತೆಷ್ಟೋ ಬಾರಿ ನಾನೆ ಶಿಲುಬೆಗೇರಿದ್ದೇನೆ.
ಅಂತರವಿಷ್ಟೆ: ನನ್ನ ಕೊಲೆ ಮಾಡಿದವರು ಸಾಯುತ್ತಾರೆ
ಸಾಯುವದಿಲ್ಲ ನಾನು, ನನಗೆ ಸಾವೇ ಇಲ್ಲ.
ಎಲ, ಬುದ್ಧಿಗೇಡಿ !
ದಾನಪಡೆದ ಟ್ಯಾಂಕುಗಳ ತಂದು
ಉರುಳಿಸುತ್ತಿರುವೆ ನನ್ನೆದೆಯ ಮೇಲೆ.
ಹಗಲಿರುಳು ನಪಲಮ್ ಬಾಂಬುಗಳ ಮಳೆಗರೆವೆ.
ಕೇಳು: ಒಂದಿಲ್ಲ ಒಂದು ದಿನ ಆಯಾಸಗೊಂಡು ನೀನು ದಣಿವೆ.
ನನ್ನ ಕೈಗಳಿಗೆಂತು ಸಂಕೋಲೆ ತೊಡಿಸುವೆ ನೀನು,
ನನ್ನ ಕೈಗಳು ಇಗೋ ಏಳು ಕೋಟಿ;
ಯಾವ ತಲೆಗಳ ಕಡಿದು ಹಾಕುವೆ ಹೇಳು,
ಏಳ್ಕೋಟಿ ತಲೆಗಳಿವೆ ನನ್ನ ಭುಜದ ಮೇಲೆ.

[ಮೂಲ ಉರ್ದು: ಕೈಫಿ ಆಜ್ಮಿ]

ಎರಡು ರಂಗದ ಯುದ್ಧ

ಬೆಳಗಾಗುವುದರೊಳಗೆ ಯುದ್ಧದ ಸುದ್ದಿ ಹಬ್ಬಿ
ಕೆಟ್ಟ ಕಹಿಯಾಗಿತ್ತು ಬೆಳಗಿನ ಚಹ:
ಸುಡುತಿತ್ತು ಯುದ್ಧವಿರಾಮದ ರೇಖೆ; ಆಚೆಯವರಿಗೆ
ವಿನಾಕಾರಣ ತುರಿಕೆ,—ಕೆರೆದಂತೆ ಭೂಮಿದಾಹ.
ಪಾಕಿಗಳ ತುಫಾಕಿಗಳ ಭೂಬಿಟ್ಟು, ಪರಿಸ್ಥಿತಿ
ವಿಕೋಪಕ್ಕೆ ಹೋದಾಗ ಮರೆಗೆ ನಿಂತು ಹುರಿದುಂಬಿಸುವ
ಮಸಲತ್ತು; ಅದುಮಿಟ್ಟ ಬದ್ಧದ್ವೇಷದ ಬಾಂಬು ಸಿಡಿದು
ನೆರೆ—ಹೊರೆಯಾಗಿ ಬೆಂಕಿ ಕಾರತೊಡಗಿತ್ತು.
ರೇಡಿಯೊ ಸೆಟ್ಟಿನಲಿ ಕಿವಿಯಿಟ್ಟು—
ನ್ಯಾಟ್ ಬೆನ್ನಟ್ಟಿ, ಸೇಬರ್‌ಜೆಟ್ಟು ಜಿಟ್ಟೆಯಂತೆ ಪಟ ಪಟ ನೆಲಕುರುಳಿ,
ಚಾಫೀ ಟ್ಯಾಂಕು ಚೂರಾಗಿ, ಶಸ್ತ್ರಗಳ ಚೆಲ್ಲಿ ಸೈನ್ಯ ಗುಡಚಾಪಿ ಸುತ್ತಿ,
'ಖೈಬರ್' ಖಬರುಗೆಟ್ಟು, 'ಶಹಜಹಾನ್' ಕುಂಟುತ್ತ ಕೂರುತ್ತ
ಸಾಗರದ ತಳ ಕಂಡಿರಲು,
ನಾಣ್ಯ ತೂರಿದ ಹಾಗೆ ಒಂದೊಂದೆ ಠಾಣ್ಯ ಕೈವಶವಾಗಿ
ಮೈಯಲ್ಲಿ ಕಾವೇರಿತ್ತು.
ಯಮನ ಕೋಣಕ್ಕೆ ಬಣವಿ ಹಿರಿದು ಒಟ್ಟಿತ್ತು ಮೇವು.
(ನಮ್ಮ ಕಡೆಗೂ ಅಲ್ಪ ಸಾವು-ನೋವು.)
ಯುದ್ಧರತಿಯ ನಂಜೇರಿ ಉರಿದಿತ್ತು ಪಶ್ಚಿಮ ರಂಗ.
ಹಿಂಜರಿದಿತ್ತು ಗಾಯ ನೆಕ್ಕುತ್ತ
ತೊಲೆಯ ಇರುಕಿನಲಿ ಬಾಲ ಕತ್ತರಿಸಿ ತತ್ತರಿಸಿದ ಮಂಗ.
ನಾಡ ಮಕ್ಕಳ ಗಂಟಲೊತ್ತಿಕ್ಕಿ, ಮಾನವೀಯತೆಗೆ
ಗುಂಡಿಕ್ಕಿ ಗಹಗಹಿಸಿ ನಕ್ಕ
ರಕ್ಕಸನ ಹೆಡಮುರಿಗೆ ಬಿಗಿದು, ಕುಕ್ಕರಿಸಿ
ಮೆಲ್ಲನುಸಿರಾಡಿಸಿತು
ರಕ್ತ ಚಿಮ್ಮಿದ ನವೋದಯದ ಪೂರ್ವರಂಗ.
ಹೂವು ಮೊಗ್ಗೆಯ ಗೋಣು ಹಿಸುಕಿ, ಕಳ್ಳು-ಬಳ್ಳಿಗಳ ಹಿಂಡಿ

ಕೊಂಬೆಗಳ ಚೆಲ್ಲಾಪಿಲ್ಲಿ ಕಡಿದೊಗೆದ ಹೆಮ್ಮರದ ಹೆಮ್ಮೆ
ಮತ್ತೆ ಚಿಗುರೊಡೆದಿತ್ತು: ಹಸಿರು-ಬಂಗಾರ,
ಹಳದಿ ಹೂಗಳ ಕುಸುರು ತೂಗಿತ್ತು ಮೈಲು-ಮೈಲು.
ತನ್ನ ಮಕ್ಕಳ ಹೆಣವ ಹೊತ್ತು ಸಾಗಿಸಿದ ಪದ್ಮಾ ನದಿ
ಹರಿದಿಹುದು ನಿರಂತರ ಮುಕ್ತವಾಹಿನಿಯಾಗಿ
ಸ್ವಾತಂತ್ರ್ಯದ ಮೂಲ ಸೆಲೆಯ ಕುಡಿದು.
ಒಂಬತ್ತು ತಿಂಗಳ ತುಳಿತ, ಹಿಂಸೆ, ಸಂಕಟ ಹೊತ್ತು
ಹಸಿರು ನೆಲ—ಬಿಸಿ ನೆತ್ತರ ಬಿಂದು—ಬೇನೆ ತಿಂದು
ಬಂಗ್ಲಾದೇಶ ಉದಯಿಸಿತ್ತು.
ಅಹಂಕಾರ ಹೇರಿ ಅದ್ಧೂರಿಯಿಂದ ಬಂದ
ಅಮೇರಿಕೆಯ ಮಾರಿ
ಭೀಮಾರಿಯಾಗಿ ದೂರ ಸಾಗರದಲ್ಲಿ ನೌಕೆ ಠಳಾಯಿಸಿತ್ತು.
ಮೂಡಿತ್ತು ಏಸಿಯದ ಆಕಾಶದಲ್ಲಿ ಹೊಸ ತಾರೆ
ಭಾರತಿಯ ಮೂಗು-ನತ್ತು.

೨

ದೂರದಲಿ ಕುಳಿತು ಬಿಸಿ ಬಿಸಿ ಸುದ್ದಿಗಳ ಮಸಾಲೆ
ದೋಸೆಯ ತಿಂದು, ಬಿಟ್ಟಿ ಕಾಫಿಯ ಕುಡಿದು
ಹಸಿ-ಬಿಸಿ ಯುದ್ಧಗೀತೆಯ ಬರೆವ ಚಪಲ.
'ಆಗ ಅಬ್ದುಲ್ ಹಮೀದ್ ಈಗ ಮೋಹಿಂದರ ಸಿಂಗ್
ಸಾವಿರದ ಸೈನಿಕರು ನುಗ್ಗಿ ಜೀವ ಸಫಲ.....'
ಸುಳ್ಳಲ್ಲ, ಇವನಿಗೂ ಕುಳಿತಲ್ಲೆ ವೀರಾವೇಶ;
ಎತ್ತಿ ಹಿಡಿಯಲಾರನು ಗನ್ನು, ಕೆಳಗಿಡಲಾರ ಪೆನ್ನು,
ಕಾಲ ಕೆಳಗಿನ ಮಣ್ಣು ಜರೆದಂತೆ ಭಾಸ.
ಜೀವಕ್ಕೆ ಶ್ರುತಿ ಹಿಡಿದು ಮಾತು ಕೃತಿಯಾಗದೆಯೆ
ಆಕಾಶಕ್ಕೆ ಚಿಕ್ಕೆಗಳ ತೂತು ಬಿದ್ದಂತೆ ಆಭಾಸ.
ಇವನ ಠಾಣ್ಯದ ಸುತ್ತು ಹತ್ತಿರದಲ್ಲೆ ಮೋಸದ ಸುರಂಗ,
ಬಾಯಿಬಡಕರ ತೋಪು, ಲಂಚಬಡಕರ ಸಂಚು

ಸ್ವಾರ್ಥಿಗಳ ಕಂದಕದಲ್ಲಿ ಆತ್ಮಸಂರಕ್ಷಣೆಯ ಹೊಂಚು...
ಇವರ ವಿಷವರ್ತುಲವ ಕಡಿದು, ವೈಯಕ್ತಿಕತೆಯ ಧ್ವಜವನ್ನೆತ್ತಿ
ಭಾವದ ಮಧ್ಯಬಿಂದುವಿನಿಂದ ಬುದ್ಧಿಯ ಸಮಸ್ತ ಪರಿಘದವರೆಗೆ
ನಡೆದಾಡಿ ಹಾಡಬಲ್ಲನೆ ? ಸಮಷ್ಟಿಯ ಕೂಡಬಲ್ಲನೆ ?
ಆ ರಂಗದಲ್ಲಿ ಹೋರಾಡಿ ಗೆಲ್ಲಲು ಸೈನ್ಯ ಸಿದ್ಧವಿತ್ತು; ಇಲ್ಲಿ
ಬೇಕಿದೆ ಅದೇ ಶಿಸ್ತು, ನಿಯತ್ತು; ಗುಲ್ಲು ಎಬ್ಬಿಸದೆ ಈ ರಂಗದಲ್ಲೂ
ಗೆಲ್ಲು: ನಿನ್ನ ಸೇನಾಧಿಪತಿ ಅಂತರಂಗದ ಸೊಲ್ಲು.

ಕೊಡೆ

ಕೊಡೆ ಹಿಡಿಯುತ್ತೇವೆ:
ಬಿಸಿಲಿಗೆ, ಮಳೆಗೆ, ದೊಡ್ಡವರ ಕಾರು
ಸಿಡಿಸುವ ಕೊಳೆಗೆ, ಆಗದವರು
ಎದುರಿಗೆ ಬಂದಾಗ ಮರೆಗೆ—
ಹೊತ್ತು ಬಂದಂತೆ.

ಮತ್ತೊಬ್ಬರ ತಲೆಗೆ
ನೆರಳು ಮಾಡುವ ಉಸಾಬರಿಗೆ
ಹೋಗಿ ಚುಚ್ಚುತ್ತೇವೆ;
ಮೆಚ್ಚುತ್ತೇವೆ: ಹೆಣ್ಣು ಏರಿಸಿದ
ಹೂವಿನ ಕೊಡೆಗೆ—ತಂತಿ ಮೇಲಿನ ನಡಿಗೆ.

ಏಕಚಕ್ರಾಧಿಪತಿಯ ಬೆಳ್ಗೊಡೆಗೆ
ಬೆಂಕಿ ಹಚ್ಚುತ್ತೇವೆ. ಮೆರೆಸುತ್ತೇವೆ
ಉಧೋ ಉಧೋ ಎಂದು
ಛತ್ರ ಚಾಮರ ಹಿಡಿದು
ಪಲ್ಲಕ್ಕಿಯಲ್ಲಿ ಬೇಕಾದ ದೇವರನಿಟ್ಟು.

ಹೊತ್ತು ಹೋದಂತೆ ಮಡಿಚಿ
ಹಿಡಿಯುತ್ತೇವೆ ನಮ್ಮ ಅಭಿರುಚಿ-
ಗೆ ತಕ್ಕಂತೆ; ಬೆದರಿಸಲಿಕ್ಕೆ
ನಾಯಿಗೆ, ನಡೆಯಲಿಕ್ಕೆ
ಊರುಗೋಲಾಗಿ.

ಸರ್ವಜ್ಞಕವಿ

ಮುಚ್ಚಿಟ್ಟು ಮುಗ್ಗುನಾರುವ ಒಳಬಾಳ ಬಿಚ್ಚಿ
  ಬಿಸಿಲಿಗೆ, ಹಂಗು—ಹಾತೆಗಳ ಕೊಡವಿ, ಬರಿನೆತ್ತಿ
  ಹೊರಟ ಜಗದಿ ಸ್ವತಂತ್ರ, ಸಂದಿ-ಗೊಂದಿಯ ಸುತ್ತಿ
ಹೊಲಸು-ಕೊಳೆ-ಕಸಕೆ ಬೆಂಕಿ ಹಚ್ಚಿ, ಒಳಿತನು ಮೆಚ್ಚಿ
ತಲೆಯ ಮೇಲಿಟ್ಟು, ಡಾಂಭಿಕರನೆತ್ತೆತ್ತಿ ಒಗೆದ.
  ನಕ್ಕು ನಗಿಸಿದ ಸ್ವರ್ಗಕ್ಕೆ ಕಿಚ್ಚು ಹಚ್ಚುವುದ
  ಕಲಿಸಿ. ಕೆಟ್ಟ ರಕ್ತದ ಕುರುವೊಡೆದು ಲೇಪಿಸಿದ
ಗಂಧ, ತನಗು ಜಗಕೂ ನಡುವೆ ತಕ್ಕ ತ್ರಿಪದಿಯ
ಬಂಧ: ಬದುಕು-ಬಂಗಾರಕ್ಕೆ ಒರೆ ಹಚ್ಚಿದ.
  ಮನೆಯಿಲ್ಲ, ಮಠವಿಲ್ಲ: ಊರೆಲ್ಲ ನೆಂಟರು.
  ಎಲ್ಲಿ, ಯಾರಿವನ ಕಣ್ಣು ತಪ್ಪಿಸಿದ ಬಂಟರು ?
ಬಳ್ಳಿಗುರುಡರಿಗೊಳ್ಳೆ ಗುರುವಾಗಿ ಕೈಹಿಡಿದ.
  ಋಷಿಯಲ್ಲ ? ಋಜುಬಾಳ ಋಷಿ. ನಿಜವ ಪರಿಭಾವಿಸಿ:
  ಇವನ ಕನ್ನಡಿಯಿರದೆ ನಮ್ಮ ಮುಖವೆಲ್ಲ ಮಸಿ.

ಬೆಳ್ಳಿಹಬ್ಬದ ಮುಡಿಪು

ಅಂದು ಮಧ್ಯರಾತ್ರಿ—
ಕತ್ತಲೆಗು ಅದೆಂಥ ಬೆಳಕಿನ ಮೈತ್ರಿ !
ಚಿಕ್ಕೆಗಳು ನೆಲದೊಳಗೆ ಭವ್ಯಕನಸಿನ ಬೀಜ ಊರಿದಂತೆ,
ಗಾಳಿ-ನೀರು ನಿರ್ಭಯವಾಗಿ ಹರಿದಂತೆ,
ತೇರು ಸಡಗರಗೊಂಡು ಸಾಗಿದಂತೆ;
ಬಾನಿನಲಿ ಗರುಡ ಗಂಭೀರವಾಗಿ ತೇಲಿದಂತೆ;
ಎಲ್ಲರಿಗು ಎತ್ತರದಲ್ಲಿ ಬಲಭುಜದಮೇಲೆ
ಧ್ವಜವು ಹಾರಿದಂತೆ,
ನಾಡಿನುದ್ದಗಲಕ್ಕು ಬಿಡುಗಡೆಯ ತೊರೆಯುಕ್ಕಿ
ಧುಮ್ಮಿಕ್ಕಿ ಮೊರೆದಂತೆ,
ಬಿದ್ದಿರುವ ಆನೆ ತಾನೆ ಮೈ ಕೊಡವಿ ಮೇಲೆದ್ದು ನಿಂತಂತೆ,
ಮರದ ತುದಿಯಿಂದ ಹಾರಿದ ಹದ್ದು ಮೋಡಗಳ ದಾಟಿ
ವಿಮಾನವಾಗಿ ಪಯಣಿಸಿದಂತೆ,
ನೆಲದ ಕರಿಕೆಯ ಬೇರು ಮಾರುದ್ದ ಕುಡಿಚಾಚಿದಂತೆ
ಹೊಸಯುಗದ ಹಸುಗೂಸಿಗುಸಿರು ಬಂದಂತೆ
ಅಂದು ಮಧ್ಯರಾತ್ರಿ-
ಎಷ್ಟು ಹೇಳಿದರೂ ತೀರದಂತೆ.

ಹಾಲುಗಲ್ಲಿನ ಗೋಪುರದ ತಳಹದಿಯ
ಕಲ್ಲಾಗಿ, ಗಚ್ಚು-ಗಾರೆಗಳಾಗಿ
ಮಣ್ಣ ಮರೆಗಿರುವ ಚಿನ್ಮಯ ಹುತಾತ್ಮರಿಗೆ
ಶ್ರದ್ಧಾಂಜಲಿ—
ಇಂದಿನುತ್ಸವದಲ್ಲಿ ಅವರದೇ ಬಿಜಲಿ.

ಕಾಲು ಶತಮಾನ ಕಾಲನಿಗೊಂದು ಹನಿ—
ನಮಗೋ ನಮ್ಮ ಹೋರಾಟದಲಿ ಅಗೆಯುತ್ತ ಹೊರಟ ಚಿನ್ನದ ಗಣಿ,
ಕಲ್ಲುಮಣ್ಣನು ಹೊತ್ತು ಬೆವರೊರೆಸಿ ಮತ್ತೆ

ತೋಳೇರಿಸಲು ಈಗ ದೊರಕಿದ್ದು ಬೆಳ್ಳಿ.
ಲಕಲಕಿಸಿ ದೂರ ಗುರಿಯೆಡೆಗೆ ತೋರುಬೆರಳೆತ್ತಿ.
ದಾರಿಯಲಿ ಕಾಗೆ ಬಂಗಾರಕ್ಕೆ ಮರುಳಾಗಿ ಆಗೀಗ
ಬಾಯಿ ಬಿಟ್ಟಿದ್ದುಂಟು.
ಕೊನೆಗೆ ಸಾಕೆನಿಸಿದ್ದು ಹದಿನಾಲ್ಕು ಕ್ಯಾರೆಟ್ಟು.

ಏರಬೇಕಾದಲ್ಲಿ ಇಳಿದು, ಇಳಿಯಬೇಕಾದಲ್ಲಿ ಹುಚ್ಚುಚ್ಚಾರ
ಏರಿದೆ ಬೆಲೆ : ಭಲೆ ನಾವು ಹಾರಿಸಿದ ರಾಕೆಟ್ಟು—
ಒಟ್ಟು ಎಡವಿದರೂ ದಾರಿ ಸಾಗಿದೆ;
ತಡವಾದರೂ ಕಾಲ ಮಿಂಚಿಲ್ಲ, ಕಾರ್ಮೋಡದಂಚಿನಲಿ
ಬೆಳ್ಳಿ ರೇಖೆ. ಗಾಳಿಗಲ್ಲಾಡಿದರೂ ಗಟ್ಟಿನಿಂತಿದೆ
ನಿರ್ಧಾರದ ಪತಾಕೆ.

ಘೋಷಣೆಯ ಮಂಜು ಗೌಸಣಿಗೆ ಸರಿದು
ನಿಜರೂಪಕ್ಕೆ ಜನವು ಹಾತೊರೆದಿದೆ.
ಅಲ್ಲಲ್ಲಿ ತಗ್ಗಿ ಬಗ್ಗಿ ಮುದುಡಿಕೊಂಡಿರುವ
ಸಮಾಜದ ಬಟ್ಟೆ ನಿಗುಚಿ, ಏರುಪೇರುಗಳನುಳಿದು
ಒಂದೆ ಪಾತಳಿಯಲ್ಲಿ ನಿಲಬಯಸಿದೆ.
ಗಳಿಕೆ-ಬಳಕೆಯ ಲೆಕ್ಕ ಬಾಯ್ದೂಡದೆಯೆ ಭಾರದೊತ್ತಡಕ್ಕೆ
ತ್ರಾಸು
ತೂಗುತ್ತಿದೆ ಹಾಗು-ಹೀಗೂ;
ಬಂದು ಹೋಗುತ್ತವೆ ನಡುವೆ ಅಡ್ಡ ಸೋಗು.
ಮುಗಿದೀತು ಬೆಳಿಗ್ಗೆ ಶ್ರೀರಾಮಪಟ್ಟಾಭಿಷೇಕ,
ತೂಕಡಿಸದಿದ್ದರೆ ಬೆಳತನಕ ಕಾದದ್ದಕ್ಕು ಸಾರ್ಥಕ.
ಜನ ಸಾಮಾನ್ಯ ಇಂದಿನ ಅನನ್ಯ ಧಾನ್ಯ—
ಬೀಸುಕಲ್ಲಿನ ಮುಕ್ಕು ? ಅಲ್ಲ
ಭದ್ರಾವತಿಯ ಉಕ್ಕು.
ಹಕ್ಕು ಚಲಾಯಿಸುವವರೆ ಎಲ್ಲರೂ
ಹೊಣೆಗಾರಿಕೆಗೆ ಮಾತ್ರ ತುಕ್ಕು.

ಮಿಕ್ಕವರ ಕಲ್ಯಾಣಕ್ಕೆ ಯೋಜನೆಯ ಯೋಜನ ಕಡತ,
ಭೂಮಿ-ಸೀಮಿ ನಮ್ಮದೇ: ನಾವೇ ಸ್ವಾಮಿ—
ನಿಂತದ್ದು ಹೆರವರ ಕಾಲಮೇಲೆ, ಕೈಯೂರಿದ್ದು
ಮತ್ತೊಬ್ಬರ ಹೆಗಲ ಮೇಲೆ.
ಎರಡೂ ಜಾರಿ ಬಿದ್ದು, ಎದ್ದು ನಮ್ಮ ಅಸ್ತಿತ್ವಕ್ಕೆ ಧಕ್ಕೆ
ತಾಗದ ಹಾಗೆ ಎದೆ ಸೆಟೆಸಿದೆ ಹೀಗೆ.
ನಾವು ನಾವಾಗಿ ಸುಳಿದೆಗೆದು ಬೆಳೆದು
ಸ್ವಯಂ ಪರಿಪೂರ್ಣತೆಯ ಕಾವಿನಲಿ ಮಾಗಿ
ನಿಲ್ಲುತ್ತೇವೆ ನಮ್ಮ ಕಾಲ ಮೇಲೆ,
ಅಡಿಯ ಮುಂದಿಟ್ಟು, ಗೆಲ್ಲುತ್ತೇವೆ ಅನಿಷ್ಟಗಳನೆಲ್ಲ
ಬಡಿದು ಅಡಿಗಲ್ಲ ಮೇಲೆ.

ಬಿಡುಗಡೆಯ ಬೆಳ್ಳಿ ಹಬ್ಬದ ಮುಡಿಪು ಸಲ್ಲಿಸಲು
ಹರಯದ ನಡುಹಗಲಲ್ಲಿ ನಿಂತು
ಹೆಗಲುಕೊಟ್ಟಿದ್ದೇವೆ: ಕಳೆದ ಮುಂಜಾವಿಗು
ಬರುವ ಮುಂಜಾವಿಗು.
ಕಂಬಿ ಹೊತ್ತು ಪರಿಷೆಯ ಕೂಡ ಪರ್ವತವನೇರಿ
ಹೊರಟಿದ್ದೇವೆ:
ಹೊಸ ಯುಗಾದಿಯ ರಥೋತ್ಸವಕ್ಕೆ.
ಹಾಲಗಿರಿ, ಮೇಲಗಿರಿ, ಸಿದ್ಧಗಿರಿ ಸಿಂಹಾಸನ ಗಿರಿ
ಶ್ರೀಪಾದಕೆ
ಉಘೇ ಉಘೇ ಉಘೇ.

ಶ್ರೀ ಜ. ಚ. ನಿ.

ನೂರೊಂದು ಹೊತ್ತಗೆಯ ಕ್ಷೇತ್ರ ವಿಸ್ತಾರದಲಿ
    ಹಲವು ಬಗೆ-ಬೀಜಗಳ ಬಿತ್ತಿಗೆ ಸಾಲು. ತತಿಗೆ
    ತಕ್ಕಂತೆ ಹಿತ ಮಿತವಾಗಿ, ಹೊಳೆದಂತೆ ಮತಿಗೆ.
ಜೊತೆಗೆ ಎಡೆಹೊಡೆದು ಕಲ್ಲು ಕಸಕಡ್ಡಿ ತೆಗೆದು
ಹಸನಾಗಿಡುವ ಕಲೆ. ಪುರಾತನ ಜ್ಞಾನ ಸಂ-
    ಚಯಕೆ ಕಾಲುವೆ ತೋಡಿ ನೀರುಣಿಸಿದಂಥ ಬೆಳೆ.
    ಬದುವಿನಲಿ ವಚನ ರಚನೆಯ ಚೆಂಡುಹೂವುಗಳೆ
ದಂಡೆ. ಷಟ್ಸ್ಥಲದ ಕಣದಲ್ಲಿ ಜೀವನದಹಂ-
ಕೃತಿಯ ಹಂತಿಯ ಕಟ್ಟಿ ತುಳಿಸಿ ಗಾಳಿಗೆ ತೂರಿ
    ಸ್ವಾನುಭವಸಾರ ಸಿದ್ಧಾಂತ ಸಂಪುಟ ರಾಶಿ:
    ಹಗೆಹದಲಿ ಹಾಕಿ ಬರಗಾಲಕ್ಕೆ ತೆಗೆದಿರಿಸಿ
ಮುಗ್ಗು ತಿನ್ನುವುದಲ್ಲ; ನಿತ್ಯ ಬದುಕಿನ ದಾರಿ.
    ದಣಿವಿರದೆ ತೋಡಿ ತೆಗೆಯುವರು ಚಿನ್ನದ ಗಣಿಯ
    ಇರವು—ಬರೆಹದ ನಡುವೆ ತೆರವು ತುಂಬುವ ಮಣಿಹ.

ಮನುಷ್ಯಪ್ರಾಣಿ

ಎರಡೂ ಕಾಲು ಸಮವಿದ್ದರೂ ವಿಷಮ ನಡೆ. ಬರಿ ಗಾಳಿ-
ಯಲ್ಲಿ ಕೈಬೀಸಿ, ಹೊಟ್ಟೆಯ ಕಡೆಗೆ ಮುಖ. ಸೊಂಟದ
ಸುತ್ತು ಗಾಣ, ತಿರುಗುವ ಕೋಣ. ಉಳಿದ ಕಡೆಗೆಲ್ಲ
ತುಂಬ ಜಾಣ. ಬಾಗುವದು ನಡ ಮುರಿದಂತೆ, ಕುರ್ಚಿ
ಸಿಕ್ಕಾಗ ಬೀಗುವದು. ಬರೆದು, ತಲೆಕೆರೆದು ಬರಿದೆ ಹರಿ-
ಹಾಯುವದು. ಚಾಪೆಯ ಕೆಳಗೆ ನುಸಿದು, ನಿಷ್ಕಾರಣ
ಹಲ್ಲು ಕಿರಿಯುವದು; ಒಳಗೊಳಗೆ ಮಸೆದು, ನುಣ್ಣಗೆ
ಹೊಸೆದು ಬಲೆಗೆ ಹಗ್ಗ, ಎಳೆಯಿರದೆ ಮಾತಿನ ಮಗ್ಗ
ನೇಯುವದು: ಕನಸು-ಪೀತಾಂಬರವ ಉಡಿಸಿ ನೋಡಿ
ಮುದ್ದಾಡಿ, ಗುದ್ದಾಡಿ, ಒದ್ದಾಡುವದು; ಎದ್ದಾಗ ಬೆಳಗು,
ಸುಮ್ಮನಿದ್ದಾಗ ಒಳ-ಹೊರಗು ಕೊರಗು. ಬುರುಗಿನಲ್ಲಿ
ಕಾಮನಬಿಲ್ಲ ಬೆರಗು. ಭೂಮಿಯಿಂದ ಜಿಗಿದು ಸ್ವರ್ಗಕ್ಕೆ,
ವರ್ಗ ಬೇಕು: ಎಷ್ಟು ದಿನ ದುರುಗಮುರುಗಿಯ
ಬಾರುಕೋಲಿಗೆ ಹೀಗೆ ಮೈಯನೊಡ್ಡುವದು ?

ಋಷಿಯಲ್ಲದವನು ಕಾವ್ಯ ಕಟ್ಟಲಾರ ?
ಪಾನಪಟ್ಟಿ ಕಟ್ಟಿಸಿ ತಿಂದು ಖುಷಿ ಪಡುವ ಬಾರ.
ಹೊಗಳಿಕೆಗೂ ನಾಯ ಬೊಗಳಿಕೆಗೂ ಅಂತರ ಕಡಮೆ,
ನಿಂತರೂ ನಟಿಸುವಂತಿರಬೇಕು, ಎಡವಿದರೂ ಜೋಕು.
ಒಂಟಿ ಬೇಸರು: ಜಂಟಿ, ಕುಂಟಿ ತಪ್ಪಿದರೆ ಕುರುಡಿ
ಕತ್ತಲೆಯಲ್ಲಿ ಕೀಲು ಕಳಚಿ ಗಡಗಡ ಒಗ್ಗಾಲಿ ಚಕ್ಕಡಿ.
ಕಂಡವರ ಕಟ್ಟೆಗೆ ಕೂತು, ಪಂಟು ಹೊಡೆದು, ಯಾರದೊ
ನಂಟು ಹಚ್ಚಿ, ಮಾಳಿಗೆ ಹತ್ತಿ ಒದೆಯುತ್ತಾನೆ
ಏಣಿ. ಹೊತ್ತು ಬಂದಾಗ ಹೋಟಲು ಮಾಣಿ, ಇಲ್ಲ ರಾಜ
ಕಾರಣಿ; ಅದೂ ಬಿಟ್ಟರೆ ಧರಣಿ ಕೂತು ನಾಮಸ್ಮರಣಿ.
ಕೊಂಡಿಗೆ ಕೊಂಡಿ ಕೂಡಿಸಿ ಸರಪಳಿಯ ಕೊರಳಿಗೆ ಸುತ್ತಿ—
ಕೊಂಡು ನಡೆದಿದ್ದಾನೆ: ಪ್ರಾಣಿ ಸಂಗ್ರಹಾಲಯದೊಳಗೆ
ತಿರುಗಿ ಸ್ಥಾನವಿಲ್ಲದ್ದಕ್ಕೆ ಮರುಗಿ, ಉಳಿದಿದ್ದಾನೆ ಹೊರಗೆ.

ಮೃತ್ಯುಘೋಷಣೆ

೧

ನವೋದಯ ಕಾವ್ಯ ಎಂದೋ ಸತ್ತು ಹೋಗಿದೆ;
ಈಗಾಗಲೇ ಇದು ನಿಮಗೆ ಗೊತ್ತಿದೆ.
ನವ್ಯಕಾವ್ಯ:
ಅದಂತೂ ಈಗ ಸಂಪೂರ್ಣ ಸತ್ತು ನಾರುತ್ತಿದೆ.
ಬಹುಶಃ ನಿಮಗಿದರ ನಾತ ಬಡಿದಿರಲಿಕ್ಕಿಲ್ಲ;
ನಿಮಗೇ ಏಕೆ, ನಮಗೂ ಗೊತ್ತಿರಲಿಲ್ಲ ಇಷ್ಟು ದಿನ
ಒಂದೇ ಮನೆಯಲ್ಲಿ ಕೂಡಿ ಆಡಿದರೂ.
ಮೊನ್ನೆ ಅಪರಾತ್ರಿ ಯಾವುದೊ ಕೆಟ್ಟಕನಸು
ಬಿದ್ದು ಎಚ್ಚರಾದಾಗ
ಬದಿಯಲ್ಲಿಯೇ ಇದು ಅನಾಮತ್ತು ಸತ್ತು ಬಿದ್ದಿರಬೇಕೇ ?
ಆಗಲೆ ಇದ್ದು ಬಿದ್ದುದನ್ನೆಲ್ಲ ಅಲ್ಲಿಯೇ ಒಗೆದು
ಸುದ್ದೀ ಹೇಳಲು ಎದ್ದು ಬಂದೆವು.
ಆದರೆ ಅಳಬೇಡಿ, ದಯಮಾಡಿ; ನಾವಿದ್ದೇವಲ್ಲ
ಧೈರ್ಯ ತಂದುಕೊಳ್ಳಿ.
ಯಾರಾದರೂ ನಾಲ್ಕು ಜನ ಬಂದು ಹೆಗಲುಗೊಟ್ಟು
ಪುಣ್ಯ ಕಟ್ಟಿಕೊಳ್ಳಿ.

೨

ಸತ್ತ ಕಾವ್ಯವನ್ನು ಹೊತ್ತು ಕುಣಿಯುವ ತೊತ್ತುಗಳೇ
ಬೋಳೆ ವಿಮರ್ಶಕರೇ,
ಲೋಳೆ ಕವಿಗಳೇ,
ಒಟ್ಟಿನಲ್ಲಿ ಸಟ್ಟಾ ನಪುಂಸಕರೇ,
ಎಚ್ಚರಿಕೆ.
ಅವರ ಹೋಳೀ ಹಬ್ಬದಲ್ಲಿ ನಾವೂ ಹಲಗೆ ಬಾರಿಸಿ
ಕಂಡಕಂಡವರ ಮೇಲೆ ಓಕುಳಿ ಚೆಲ್ಲಿ
ಬೆಳತನಕ ಪದಾ ಹೇಳಿದ್ದು

ನೀವು ಕದಾ ಮುಚ್ಚಿ, ಕಿಡಕಿಯಲ್ಲಿ ಹಣಿಕಿ ಹಾಕಿದ್ದು
ನಾವು ಸತ್ತರೂ ಮರೆಯುವದಿಲ್ಲ.
ಇದೇ ಬರುವ ಯುಗಾದಿ ಅಮವಾಸಿಯ ದಿನ
ನಮ್ಮ ದ್ಯಾಮವ್ವನ ಗುಡಿಗೆ ಬಂದು ಡೊಳ್ಳು ಬಾರಿಸಿ
ದಿಂಡರಕಿ ಉರುಳಿ
ಅಮ್ಮನ ಅಂಗಾರ ಹಚ್ಚಿಕೊಂಡು ಉದ್ಧಾರಾಗಿರಿ.
ನೆನಪಿನಲ್ಲಿಟ್ಟುಕೊಳ್ಳಿ:
ನಮ್ಮದು ವ್ಯಕ್ತಿಪೂಜೆಯಲ್ಲ, ಶಕ್ತಿಪೂಜೆ.

೩

ನೆಲೆ ನಿಂತವರನ್ನು ನಿಂತ ಕಾಲ ಮೇಲೆ
ಗುಳೇ ಹೊರಡಿಸುವದು,
ಸನ್ನಿವೇಶದ ತೀವ್ರತೆಗೆ ತಕ್ಕಂತೆ ಹೊಸ ಹೊಸ ದನಿತೆಗೆದು
ಕಿರುಚಿಕೊಳ್ಳುವದು
(ಪ್ರಸಂಗ ಬಂದರೆ ಸುಣುಚಿಕೊಳ್ಳುವದು)
ಎಲ್ಲ ಮಠಗಳ ಮುಂದೆ ನಮ್ಮದೇ ತೇರು ಎಳೆಯುವದು,
ಪಟ್ಟಭದ್ರರ ನೆಳಲನ್ನು ಅಳಿಸಿ, ದಿಕ್ಕಿಲ್ಲದ
ಕಂದಮ್ಮಗಳಿಗೆ
ದಾರಿ ತೋರಿಸುವದು,
ಇವೇ ಮೊದಲಾದುವು ನಮ್ಮ ಗುರಿ.
(ಇನ್ನೂ ಕೆಲವಿವೆ: ಅಡವಿಯಲ್ಲಿ ತಪ್ಪಿಸಿಕೊಂಡ ಕುರಿಮರಿ
ಅವಕ್ಕೂ ನಾವೇ ಜವಾಬ್ದಾರಿ.)
ಇರುವುದಕ್ಕೆ ಹೊಸ ತಿರುವು ಕೊಡಲು ಬದ್ಧರಾಗಿದ್ದೇವೆ.
ಇರಲಾರದ್ದಕ್ಕೆ ? ಶಂಖ ಹಿಡಿದು ಸಿದ್ಧರಾಗಿದ್ದೇವೆ—
ಬನ್ನಿ:
ಆ ಭೂತ ಇನ್ನೂ ಸತ್ತಿರದಿದ್ದರೆ
ಎಲ್ಲರೂ ಕೂಡಿ
ಇನ್ನೊಂದು ಬಾರಿಗೆ
ಗುಂಡು ಹಾಕೋಣ.

ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ*

ನಸುಕಿನ ಕ್ಷಿತಿಜ ಕಂಠಕ್ಕೆ ಹೊಮ್ಮಿ ಆಕಾಶ-
ಕ್ಕುಲಿವ ರಾಗ, ಬಯಲನಾಲೋಡಿಸುತ ಪ್ರತಿಪ-
ದಾರ್ಥವ ಹಿಂಜಿ, ಆಲಾಪಕ್ಕೆ ಸ್ವರ ಸ್ವರೂಪ-
ದ ಹಂಜಿ: ಸೃಷ್ಟಿ ಮೂಲದ ನಾದ: ಸ್ವ-ಪ್ರಕಾಶ.
ಹಿಗ್ಗಿ ತಳತಳ ಹೊಳೆದು, ಎಳೆದು ತನ್ನೊಳಸೆಳೆದು
ಹಡೆದ ಮೂರ್ತಿಗೆ ಜೀವದುಂಬಿ ಮೊರೆವ ನಿನಾದ.
ಜಗದ ಒಡಲೊಳು ಕುದಿವ ವಿರೋಧ ತಗ್ಗಿಸಿ ಸಮೆದ
ಸ್ವಸ್ಥ ಪಿಂಡಸ್ಥಭಾವ: ಐಕ್ಯಸ್ಥಲಕೆ ನಡೆದು.
ಅನುಭಾವಿ-ಪದ ಮಧ್ಯ ನಿರವಧಿ ಕಾವುಕೂತು
ಕಣ್ಮುಚ್ಚಿತೆರೆವ ಹೊಸಜೀವ-ಭಾವದೆರಂಕೆ.
ವಚನಕ್ಕೆ ವಚನ ಕೊಟ್ಟಂತೆ ಕಟ್ಟಿದ ಸೇತು
ನೋಂತು ಶರಣರ ಕರುಳ ಮಿಡಿದು ಇಹ-ಪರ ಸೋಂಕೆ-
ಕಿವಿಗೊಟ್ಟ ಸಲಕೆ ಹೊಸಮಿಂಚು-ಕಂಚಿನ ತಾನ.
ರಸವರ್ಷ, ದಿಗ್ದಿಗಂತಸ್ಪರ್ಶ: ಪುನರುತ್ಥಾನ.

---

* ಪಂ. ಮಲ್ಲಿಕಾರ್ಜುನ ಮನಸೂರರ ಸಂಗೀತ ಕೇಳಿ

ಪು. ತಿ. ನ.

ತುಂಬಿದುದು ತುಳುಕಿ ಹೋಗದ ಹಾಗೆ ತುಟಿಯಂಚಿ-
ನಲ್ಲೆ ನಗು. ಒಗುಮಿಗುವ ನಮ್ರ ಪ್ರತಿಭೆಯ ಮಿನುಗು
ಕಣ್ಣಿನಲಿ: ಬಾನ ಬೆಳ್ಳಕ್ಕಿ ಹಾರಿದ ಬೆರಗು.
ಬೆಳ್ಳಿ ಬಟ್ಟಲಿಗೆ ದಾಳಿಂಬೆ ಬಿಡಿಸಿಡುವ ಶುಚಿ-
ರುಚಿ ಮಾತು: ಮೈದಡವಿ ಚಿಗುರಿ ಹೂಬಿಡುವ ಕೆಳೆ.
ಇರವಿನೊಳ ಹೊರಗು ಸ್ವರಲಹರಿ, ಶರದದ ಹಗಲು-
ತೆರವು ತುಂಬುತ್ತ ತೇಲುವಾಗಂತುಕ ಮುಗಿಲು.
ಜಗದಚ್ಚರಿ ತೆರಂಬೊಳೆವ ಮನದಪೂರ್ವಕಳೆ,
ಹೊಚ್ಚ ಹೊಸ ಪ್ರಕೃತಿ ವಿನಯದ ಪ್ರಜ್ಞೆ: ದೈವಾಜ್ಞೆ.
ಸಂಪ್ರದಾಯಕ್ಕೊಸೆದು ಮಸೆದ ಭಾವದ ಮೂಸೆ
ಹೊರ-ಒಳ ಜಗದ ಸೊಗದ ನಿರ್ಲಿಪ್ತ ಜಿಜ್ಞಾಸೆ.
ಆತ್ಮಪ್ರಕಟನೆ ಚೆಲುವ ಸೃಷ್ಟಿಯರಳುವ ಸಂಜ್ಞೆ.
ಮತಿ ದೇಗುಲದ ಗಂಟೆಯುಲಿಗೆ ಚಲಿಸುವ ಲೋಕ
ಬದುಕನವಲೋಕಿಸಿದ ಲೌಕಿಕ ಜೀವಪಾಕ.

ಪಂಜೆಯುವರನ್ನು ನೆನೆದು

ತಿಟಿ ತಿಟಿ ಟೈಟ್ ಪ್ಯಾಂಟು, ಒತ್ತು-ಬೂಟಿಗೆ ಗುಡ್-
ನೈಟ್ ಎಂದು, ತೆಳು ಪಂಜೆಯುಟ್ಟು, ಚಪ್ಪಲಿ ಮೆಟ್ಟಿ
ತೆಂಕಣಗಾಳಿಗೊಡ್ಡಿ ಮೈಯ, ಸಹಜ ಭೆಟ್ಟಿ-
ಯಾದ ಗೆಳೆಯರ ಜೊತೆಗೆ ಮಾತಾಡುತ್ತ ಗುಡ್ಡ-
ವೇರಿ ಕುಳಿತಂತೆ ಹಾಯೆನಿಸುವದು: ಪಂಜೆ ನಿಮ್ಮ
ನೆನೆದಾಗ. ಮಕ್ಕಳ ಜೊತೆ ಆಡಿ ಹಾಡಿ ಕುಣಿ-
ದು, ಕಥೆ ಹೇಳಿ, ನಲಿದ 'ಕವಿಶಿಷ್ಯ' ಗುರುವೆ ತಲೆ ಮಣಿ-
ದು, ನವೋದಯದ ಹೃದಯದೌದಾರ್ಯಕ್ಕೆ ನಮ್ಮ
ಹಮ್ಮು ಬಿರಿದು, ಅಂತಃಕರಣ ಚಿಮ್ಮುವುದು. ಬಿಳಿ
ಬಣ್ಣದಲ್ಲೇಳು ಬಣ್ಣಗಳ ತಿರುಗಿಸಿ ಕಣ್ಣು
ಮನ ತಣಿಸಿ ತಂಗಾಳಿಯಾಗಿ ಮಂಗಳ ಮಣ್ಣು
ಅರಳಿ ತೆನೆ-ಚಿನ್ನ: ಕನ್ನಡ ನುಡಿಯ ಗೋಧೂಳಿ
ಸಮಯಕ್ಕೆ ಹಲವು ನಕ್ಷತ್ರ ಮಿನುಗಿಸಿ ನಕ್ಕೆ.
ತೃಪ್ತಿ ತುಳುಕಿಸಿ ಶರತ್ಕಾಲದಾಗಸಕ್ಕೆ.

ಯಾರು ಕೇಳುತ್ತಾರೆ, ಹೇಳಿರಣ್ಣ

ಅಲ್ಲಿ ಮುಳುಗುತ್ತಾರೆ, ಇಲ್ಲಿ ಏಳುತ್ತಾರೆ
ಎದ್ದು ಮೆರೆಯುತ್ತಾರೆ, ಹದ್ದು ಮೀರುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಕದ್ದು ಕೇಳುತ್ತಾರೆ, ಸುದ್ದಿ ಮಾಡುತ್ತಾರೆ.
ಗುದ್ದಿ ನೋಡುತ್ತಾರೆ, ಒದ್ದು ಓಡುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಹೊರಗೆ ಮೆಚ್ಚುತ್ತಾರೆ, ಒಳಗೆ ಚುಚ್ಚುತ್ತಾರೆ
ಮರೆಗೆ ಕಚ್ಚುತ್ತಾರೆ, ತೆರೆಗೆ ಬಿಚ್ಚುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ತಲೆಯ ಕೆರೆಯುತ್ತಾರೆ, ಕಲೆಯ ಕೊರೆಯುತ್ತಾರೆ
ನೆಲವ ಮರೆಯುತ್ತಾರೆ, ಬೆಲೆಗೆ ಮೆರೆಯುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಬಲೆಯ ಬೀಸುತ್ತಾರೆ, ಬುಟ್ಟಿಗೆಸೆಯುತ್ತಾರೆ
ಇಟ್ಟು ಕೊಳೆಸುತ್ತಾರೆ, ಹೊಟ್ಟೆ ಬೆಳೆಸುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಮೇಜು ಗುದ್ದುತ್ತಾರೆ, ಮೈಕು ಮುರಿಯುತ್ತಾರೆ
ಮಾಲೆ ಬೇಡುತ್ತಾರೆ, ಮೋಜು ಮಾಡುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಫಂಡು ಎತ್ತುತ್ತಾರೆ, ಎತ್ತಿ ಹಾಕುತ್ತಾರೆ
ಬಂಡು ಹೂಡುತ್ತಾರೆ, ಬೆಂಡು ಸುಲಿಯುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಕೈಯ ಮುಗಿಯುತ್ತಾರೆ, ಕಾಲು ಕೆದರುತ್ತಾರೆ
ಬಾಲ ಹಿಡಿಯುತ್ತಾರೆ, ಮೇಲೆ ಏರುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣಾ.

ಬಾಯಿ ಬಡಿಯುತ್ತಾರೆ, ಕಾಯಿ ಒಡೆಯುತ್ತಾರೆ
ಮರ್ಜಿ ಹಿಡಿಯುತ್ತಾರೆ, ಕುರ್ಚಿ ಪಡೆಯುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣಾ.

ರೈಲು ತಡೆಯುತ್ತಾರೆ, ದೀಪ ಒಡೆಯುತ್ತಾರೆ
ಕಲ್ಲು ತೂರುತ್ತಾರೆ, ಸುಳ್ಳು ದೂರುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣಾ.

ಹೊತ್ತು ಹೊರೆವವರಿಲ್ಲ, ಕಿತ್ತು ತಿಂಬವರೆಲ್ಲ
ಬಿತ್ತಿ ಬೆಳೆದವರಿಗೂ ತುತ್ತು ಭರವಸೆಯಿಲ್ಲ
ಎತ್ತ ಹೊರಳಿದರದೇ ನೋಟವಣ್ಣಾ.

ಹೇಳುವವರೇ ಎಲ್ಲ, ಕೇಳುವವರೇ ಇಲ್ಲ
ಹೇಳಿ ಕೇಳೀ ಬಾಳ ಏಕತಾರಿಯ ಪದವ
ಯಾರು ಕೇಳುತ್ತಾರೆ ಹೇಳಿರಣ್ಣಾ.

ದಾರಿ

ಅದರಲ್ಲಿ ಇದು
ಇದರಲ್ಲಿ ಅದು: ಬಗಿದು, ಕೊಂಡಿ ಬಿಗಿದು
ಹುಗಿದು ಇಹುದು: ಕೈಮುಗಿದು.
ವೀರ್ಯವತ್ತಾಗಿ ತಿರುಗಿ ಹೊಲ-ಗದ್ದೆ-ಬಯಲು
ಹರಗಿ ತಿರುಗಾಮುರುಗ: ಹೊಸ ಹೊಸ ಕೊಯಿಲು.
ಬೆಟ್ಟ-ಕಣಿವೆ-ಕೊಳ್ಳ ಏರಿಳಿದು, ಕೆರೆ ಕಟ್ಟೆ ತುಂಬಿ ತುರುಗಿ
ಹಳ್ಳ-ಹೊಳೆ ಮಿರುಗಿ, ಎಲ್ಲೆಡೆಗು ಮೆತ್ತಗೆ ಹಸಿರು ಹುಲ್ಲು.
ತೆರೆದ ಬಾಗಿಲು ಭೂಮಿ, ಕಿಂಡಿಯಲಿ ನುಸುಳಿತು ಬಾಲ
ನಿಗುರಿಸಿ ಕಾಮಿ; ಸ್ವಾಮಿ ಒಂದಲ್ಲ ಒಂಬತ್ತು ಕಡೆಗೂ ದಾರಿ.
'ಹರಿದಾರಿ ಹರಿದಾರಿ ಹರಿದಾರಿ' ಮುಂದೆ ?
ನಿತ್ಯವಾಹನ-ಸಂಪರ್ಕ ಸಾಧನಕ್ಕೆ ರಾಷ್ಟ್ರೀಯ ಹೆದ್ದಾರಿ.
ಅವೂ ಆದಷ್ಟು ಅಗಲವಾಗುತ್ತಿವೆ ಈಚೆ.
ಅಲ್ಲಲ್ಲಿ ವಂಕಿಯಾಗಿದ್ದದ್ದು ಗಿಡಮರದ ನಡುವೆ
ಈಗ ಎಲ್ಲಾ ಕಾಣುವಂತೆ ನೇರ.
ಹಳೆಯ ಸೇತುವೆ ಬಿಚ್ಚಿ-ಕಟ್ಟಿ ಸುಧಾರಿಸುತ್ತಿವೆ.
ಓಡಾಡುತ್ತಿವೆ ಭಾರೀ ಮಾಲು ಹೇರಿದ ಲಾರಿ, ಟ್ರಕ್ಕು.
ಸಲೀಸಾಗಿ ನುಸುಳುತ್ತವೆ ಸ್ಕೂಟರು ಕಾರು;
ಆದರೂ ಕೆಲವರಿಗೆ ಸೊಕ್ಕು:
ನಡು-ಬೀದಿ ಬಳಸಿ, ಕೆಂಪುದೀಪದ ತುಟಿಕಚ್ಚಿ
ಹಿಚುಕುತ್ತಾರೆ ಸಾವಿನ ಗಲ್ಲ-ಪಲ್ಲ.
ವ್ಯರ್ಥ ನೆತ್ತರು ಚೆಲ್ಲಿ, ಒಡೆಯುತ್ತವೆ ತಲೆ
ಜೀವಕ್ಕೆ ಏನೂ ಬೆಲೆ ಇಲ್ಲವೆ ?

ಚಂದ್ರನವರೆಗೂ ಹಾರಿ ತಂದದ್ದೇನು:ಮಣ್ಣು
ಅದರಿಂದ ಬಂದದ್ದೇನು ?—
ಅಂದ್ಹಾಂಗ ಧ್ಯಾನದಲ್ಲಿ ನಾವೇ ಮುಚ್ಚಿರಬೇಕು ಕಣ್ಣು.
ಆಗಲಿಲ್ಲ ಹೋಗಲಿಲ್ಲ, ಅದೇನೋ ಹೇಳುತ್ತಾರಲ್ಲ, ಆ ಶಾಸ್ತ್ರ.

ಎಲ್ಲದರ ಪರಲು ಹರಿದು ಕೊನೆಗೆ ಎಲ್ಲೋ
ಒಂದು ಕಡೆಗೆ ಮನೆಮಾಡಿದೆವೆನ್ನಿ.
ಏನಾಯ್ತು ? ಯಾವತ್ತೂ ಒಳಗೇ ಇರುತ್ತೀರಾ ?
ಯಾವುದರ ಗುಟ್ಟು ಒಳಗಿಟ್ಟು, ಬಯಲಿಗೆ ಬರುತ್ತೀರಿ ?
ಮರೆಯೊಳಿದ್ದದ್ದಕ್ಕೆ ಹೊರಗೆ ರೇಸಿಮೆಯ ತೆರೆ. ಅದೆಲ್ಲಾ
ಖರೆ; ಹೇಗೆ, ಎಲ್ಲಿ ಗೆರೆಯೆಳೆಯುತ್ತೀರಿ ? ಕೇಳಿ-
ಸುತ್ತಲೇ ಇರುತ್ತದೆ ಯಾವುದೋ ಕರೆ, ಕರಕರೆ.
ಏನರೆ ಹೇಳಿ ಪಾರಾಗುವುದಲ್ಲ; ಹಾಗೆಂದರೆ
ಬೇಕಾದಷ್ಟಿವೆ ದಾರಿ ತಪ್ಪಿಸಿಕೊಳ್ಳಲಿಕ್ಕೆ. ಆದರೆ
ನಮ್ಮನ್ನೇ ನಾವು ಒಪ್ಪಿಸಿಕೊಳ್ಳುವುದಕ್ಕೆ ?- 'ಸುಲಿದ
ಬಾಳೆಯ ಹಣ್ಣಿನಂದದಿ' ?
'ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೆ ?'
ಗಳಿಸಿದ್ದೂ ಸಾಲದು, ಸಾಲದ್ದೂ ಸಾಲದು. 'ಉಳಿಸಿ'
'ಬೇಕು-ಸಾಕು' -ಹೀಗೆಯೇ ಎಲ್ಲ ದಾರಿಯ ಬಳಸಿ
ವಿಧ ವಿಧ ಬೋರ್ಡುಗಳ ಪರಾಕು. 'ನೂರು ಮರ, ನೂರು ಸ್ವರ'
ಒದ್ದೊಂದೂ ಅಪಸ್ವರ.
ರಸ್ತೆ ಸುರಕ್ಷಿತ ದಾಟಿದ ಮೇಲೆ ನೋಡೋಣ
ಎಂದುಕೊಂಡು ನಮ್ಮ ದಾರಿ ಹಿಡಿಯುತ್ತೇವೆ.

ಕೆಲ ಸಮಯವಾದರೂ ನಿರಾಮಯ, ನಿರ್ಜನ, ನಿರಾತಂಕ
ಅದರಪಾಡಿಗೆ ಅದನು ಬಿಟ್ಟು ಬಿಡಿ-
ಈ ದಾರಿ
ನನಗೆ ಅನಿಸಿದ ಹಾಗೆ ನಿಮಗೂ ಅನಿಸಬಹುದು
ಚೇತೋಹಾರಿ.

ಬರೆಯುಲೊಲ್ಲದ ಕವಿತೆ

ಪುನರ್ವಸು, ಪುಷ್ಯ
ಮಳೆಗರೆದಾಗ ಈ ಮನುಷ್ಯ
ಹೊರಬಂದ. ಗುದ್ದಲಿ, ಸಲಿಕೆ, ಪಿಕಾಶಿ
ಬಳಸಿ ಅಗೆದಗೆದು, ಬಳಿದು ಕೈಯಾಡಿಸಿದ.
ಮಣ್ಣು ಘಮಘಮಿಸಿತ್ತು; ಗೊಬ್ಬರ ಹಾಕಿ
ಹದಗೊಳಿಸಿದ. ಕರಿಕೆಯ ತಳಬೇರು ಮಾತ್ರ
ಸಿಗಲಿಲ್ಲ; ಕೈಗೆ ಸಿಕ್ಕಷ್ಟೆ ಜಗ್ಗಿ ಕಿತ್ತೊಗೆದ.
ಬೇರಿನ ವಾಸನೆಗೆ ಬೇರೇನೊ ನೆನೆದು ನಕ್ಕ.
ಮುಗಿಲ ಬೆಳಕಿನ ಬೀಜ ಮರವಾಗಿ ನೆಲವ ತಬ್ಬಿತ್ತು.
ಗಾಳಿ ಜೋಕಾಲಿಯಾಡಿ ತೂಕ ಹಿಡಿದಿತ್ತು.
ಸುಖದ ಸಂವೇದನೆಯಲ್ಲಿ ಮಣ್ಣ ಬೀಜ ಮೊಳೆದೋರಿತ್ತು.
ಹೊಳೆದಿತ್ತು ಅಪೂರ್ವ ಚೆಲುವಿನಲಿ ಬಯಲು.
ಯಾವುದೋ ಲಯದ ಗತ್ತಿನಲಿ ಜೀವ ಮಿಡಿದಿತ್ತು...
ದಿನಕೊಂದು ಚಂದ; ಅಮೂರ್ತಕ್ಕೆ ಮೂರ್ತತೆಯ ಬಂಧ
ಬಗೆಬಗೆಯ ಸಸಿ ಬೆಳೆದು ಪಲ್ಲವಿಸಿ ನಿಲ್ಲುವಾಮೋದ.
ಆಶ್ಲೇಷಾ, ಮಘಾ ಮಳೆಗಳ ಓಘ—ಮೊಗೆಮೊಗೆದು
ನೋಡನೋಡುತ್ತ ಹಸುರು ಹರಯಕ್ಕೆ ಬಂದಿತು ಪೂರ.
ತೊಳೆದು ಹೋಗಿತ್ತು ಕೀಡಿಯ ರೋಗ.
ಒಂದು ಬೆಳಿಗ್ಗೆ ಕಂಡವು ಮೊಗ್ಗೆ: ಸಮಸ್ತ ಪ್ರಪಂಚದ ಹಿಗ್ಗು
ಅಗ್ಗಲಿಸಿತ್ತು ಕಣ್ಣ. ಈ ಬಣ್ಣ ಇವಕೆ ಹೇಳಿ ಮಾಡಿಸಿದಂತೆ.
ಸೂರ್ಯಕಾಂತಿಯ ಸುವರ್ಣಮುಖ ಹೊರಳಿ ಪೂರ್ವಕ್ಕೆ
ದೃಷ್ಟಿ ನಿಲಿಸಿತ್ತು. ಡಾಹ್‌ಲಿಯಾ ಯಾವ ದಿಕ್ಕಿಗು ಸರಿಯೆ
ಇಷ್ಟಗಲ ಸಂತುಷ್ಟಿ. ಗುಲಾಬಿಯ ಕಪೋಲಕ್ಕೆ ಮುತ್ತು.
ಸಂಪಿಗೆಯ ಮೂಗಿನಲಿ ನತ್ತು. ಕಂಪು ಗಾಳಿಗೆ ಹೀಗೆ
ಮೆಲ್ಲಗೆ ಜಂಪು. ಚೆಂಡು ಹೂಗಳ ದಂಡೆ ಗೌರಿ ಹುಣ್ಣಿಮೆ—
ವರೆಗು. ಹಾಳೆಯ ಮೇಲೆ ವಿಧವಿಧ ಬಣ್ಣ ಸಿಂಪಡಿಸಿದಂತೆ
ಫ್ಲಾಸ್ಕ್ ಹೂಗಳ ಭಂಗಿ-ಭಣಿತೆ. ಭಲಾ ಬೇಲಿಯುನೆಲ್ಲ

ತಬ್ಬಿ ಹಬ್ಬಿರುವ ಬೋಗನ್‌ವಿಲಾ ! ಸಾಮಾನ್ಯವಲ್ಲ ಮುಳ್ಳಿನ
ಹಿಡಿತ. ಮೌನವಾಗಿಯೇ ನಗುವ ಜೀನಿಯಾ—ಬಾಡದು ಬೇಗ:
ತುಂಬಿ ಕಾಡದು. ನೂರು-ಸಾವಿರ ಕಾಸ್ಮಸ್ ಕುಸುಮಗಳ
ಒಲೆತ ಅತ್ತಿಂದಿತ್ತ, ಇತ್ತಿಂದತ್ತ. ಹಿಂಡು ಚಿಟ್ಟೆಗಳ
ಕಾಲು ಕಟ್ಟಿದ ಹಾಗೆ ಚಂಚಲ ಚಿತ್ತ. ಅಂತಃಕರಣ
ಕುಡಿ ಚಾಚಿ, ಹಿಡಿ ಹಿಡಿ ಹೂವ ಕೊಡುವ ಮಲ್ಲಿಗೆಗೆ
ಒಲ್ಲೆನ್ನದು ಮನಸು. ಬೆಳುಗಾಲದ ಬಿಸಿಲಿನಲ್ಲಿ
ಬೆಳ್ಳಿ-ಬಂಗಾರವನು ಸೂರೆಗೊಳಿಸುವ ಸೇವಂತಿಗೆಗೆ
ಸಂತಸ ಸುಗ್ಗಿ. ಈಸು ದಿನ ಎಲ್ಲಿದ್ದವೊ ಪಾತರಗಿತ್ತಿ
ಜಾತ್ರೆಗೆ ಬಂದಂತೆ ಮುತ್ತಿವೆ ಈ ಮಾನವಮಿಯ ಹೊತ್ತಿಗೆ.
ಉತ್ತರಿಯ ಬಿಸಿಲಿಗೆ ತಗ್ಗಿದ ಹೂಮೊಗವನೆತ್ತಿ ಮುತ್ತಿಡಲು
ಶರದೃತು: ವಿಜಯದಶಮಿಗೆ ಸುಗಂಧದ ಸೀಮೋಲ್ಲಂಘನ.
ಉರಿಯಿರದ, ನೆಲದ ಸಾರವ ಹೀರಿ ಬಣ್ಣದೈಸಿರಿ ತಳೆದ
ಪರಿಮಳದ ಹೂವ ಹಣತೆಯಲಿ ಬೆಳಗುವವು
ಲೌಕಿಕ ಜಿನಾಗಮಗಳೆರಡೂ.

ಇಂಥ ತಂಪೊತ್ತಿನಲಿ ಮಾನ್ಯ ಸಂಪಾದಕರೆ,
ಕವಿತೆ ಏತಕೆ ಬೇಕು ಹೇಳಿ. ಗೌರವಧನದ ಚೌರಿ ಬೀಸಿ
ಮುಂಗಡ ಚೆಕ್ಕು ಕಳಿಸಿ ಪೀಡಿಸಬೇಡಿ. ಬಾಡಿರುವ
ಹೂಗಳ ತೆಗೆದು, ಒಣಗಿದೆಲೆಗಳ ಗುಡಿಸಿ, ಅಲ್ಲಲ್ಲಿ
ಅಸ್ತಿತ್ವಕ್ಕೆ ಧಕ್ಕೆಬಾರದ ಹಾಗೆ ಬೆಳೆದ ಕಸ-ಕಳೆಯ
ಕಿತ್ತಿ, ಕುರುಪಿಯಾಡಿಸಿ, ಜರಜರಿಯಿಂದ ನೀರೆರೆಯುವಲ್ಲಿ
ನನಗೆ ಸುಖವುಂಟು. ನಿಮಗೆ ಗೊತ್ತಿಲ್ಲ: ನಮ್ಮ ನಾಯಿ
ಮಣ್ಣು ಕೆದರಿ ತಣ್ಣಗೆ ಮಲಗಿ, ಅಕ್ಕಪಕ್ಕದ ಹೂ—
ಗಿಡವ ಮುರಿದು ಮುದುಡಿಸಿದೆ; ಅದಕೆ ಸಲಿಗೆ
ಕೊಟ್ಟವನು ನಾನೇ ಎಂದು ಈಕೆಯ ಸ್ಪಷ್ಟ ಹೇಳಿಕೆ.
ನೋಡಿ, ಅದನ್ನೆಲ್ಲ ಈಗ ಸರಿಪಡಿಸಬೇಕು; ಬಿಡುವಿಲ್ಲ.
ಮೇಲಾಗಿ ಬರೆಯುವ ಮನಸ್ಸಿಲ್ಲ. ನನ್ನ ಕವಿತೆ ಇರದಿದ್ದರೆ
ವಿಶೇಷ ಸಂಚಿಕೆಯ ಬೆಲೆಯೇನೂ ಇಳಿಯುವದಿಲ್ಲ.
ತಪ್ಪು ತಿಳಿಯಬೇಡಿ, ಅರ್ಥವಿಷ್ಟೆ: ಬರೆದ ಕವಿತೆಯ
ಭಾರ ಬರೆಯದ ಕವಿತೆಗಿಂತ ಹೆಚ್ಚಿಲ್ಲ.

ಗಡಿ-ಬಿಡಿ ಗೊಂದಲಾಸುರ

ವಾರೆವಾ, ಗಡಿ—
ಮೀರಿ ವರ್ತಿಸುವ ವಾ—ನರ ಸೇನೆ.
ಹೆಂಡ ಕುಡಿಸಿ, ಕುಂಡಿಗೆ ಚೇಳು ಕಡಿಸಿ
ದೂಡಿದ ಮುಖಂಡ ಬಾಳ ಠಕ್ಕ,—ಅರೆ
ಹೊಕ್ಕು ನೆರೆ ಮನೆ—ತೋಟ—ಹೋಟಲು
ಕೊಳ್ಳಿ, ಲೂಟಿ, ಲಂಕಾದಹನ.
(ಸೀತೆ-ಮಂಡೋದರಿಗು ವಸ್ತ್ರಾಪಹರಣ)

ಮಹಾರಾಜ್ಯದಲ್ಲಿ ಆಹಾ, ಇವರದೇ ಆಡಳಿತ
ಎನುವ ಶಂಕೆ.
ಮಂಕೆ, ಎಲ್ಲಿ ನಾವೆಲ್ಲ ಕಣ್ಣುಮುಚ್ಚಿ ಆರಿಸಿ ಜೊಳ್ಳು-
ಡೊಳ್ಳು ಬಾರಿಸಿದ ಗಡಿಗಳು ?
[ಹೊತ್ತು ಬಂದಂತೆ ಬಣ್ಣ ಬದಲಾಯಿಸಿದ ಗೋಸುಂಬೆ]

ದಿನವೂ ಹಾಲು, ಉತ್ತುತ್ತಿ ದ್ರಾಕ್ಷಿ, ಗೋಡಂಬೆ
ಅದು-ಇದು ತಿಂದು. ಕುಡಿದು, ತಯಾರಿ ನಡೆಸಿದವರು ?
[ಸಿಕ್ಕಿತೆ ಕಳಕೊಂಡ ಆಕಳ—ಕರು ?]

ಎಮ್ಮೆಲ್ಲೆ ?
ಊರೂರ ಹೊಲಸಿನ ರಾಡಿ ಹೊಂಡದಲ್ಲೆ ?
ಇಲ್ಲ, ಹಿಡಿಮೇವು ಒಗೆದು
ಕೊರಳು ಕಟ್ಟಿ, ಬಿಟ್ಟ ಕೊಟ್ಟಿಗೆಯಲ್ಲೆ ?

ಅಲ್ಲಿ ಚಾಂದಣಿ ಚೌಕಿನಲ್ಲಿ
ಚಕ್ಕವಾಡಿ, ಕಾಯಿ ಕಡಿಯುತ್ತ, ಹಿರಿಯಕ್ಕ
ಪಕ್ಕಬಲಿಸಿದಳು. ಆ ಚಾಳಿ ಮನೆಮಂದಿಗೆಲ್ಲ.
ಗೊಂದಲಾಸುರರ ಬಡಾಯಿಗೆ ಸಾತ್ವಿಕರನುಡಾಯಿಸಿ

ಒತ್ತಡದಿಂದ ಬಾಯಿ ಹೊಲಿಸಿದರೆ
ಮಹಾಜನರ ಗತಿಯೇನು ?
[ಇಷ್ಟೆ ನಮ್ಮೆಲ್ಲ ಕತೆ ಮಂಕುತಿಮ್ಮ ?]

ಇನ್ನು ಬೇರೆ ಲೆಕ್ಕಾಚಾರ—
ಸಗಣಿಯವನ ಸ್ನೇಹಕ್ಕಿಂತ ಗಂಧದವರೊಡನೆ ಗುದ್ದಾಡಿ
ಬಗೆಹರಿಸಿದರೆ ಚಿಂತೆಯಿಲ್ಲ. ಇಲ್ಲವಾದರೆ
ಸಂತೆ ಕೂಡುವ ಮೊದಲೆ ಗಂಟಿ ಚೌಡಿಯರು
ಕರಕರ ಮಂಡರು ನೆರೆದು, ದೊಡ್ಡ ತಮಾಶಾ ನಡೆದು
ವ್ಯವಹಾರವೆಲ್ಲ ಹದಗೆಡಿಸುವರು.

ಭಾವೈಕ್ಯ: 'ಮಂತ್ರಿ'ಸಿದ ಬೂದಿ
ಗಾಳಿಪಾಲು.

ಯಥಾಸ್ಥಿತಿ ?


ಇಲ್ಲಿಂದ ದಿಲ್ಲಿಗೆ ಹೋದರು
(ಸಿದ್ದ ಕವಲೂರಿಗೆ ಹೋದಂತಲ್ಲ)
ಮಾತು-ಕಥೆಯಾಗಿ ಮತ್ತೆ ಇಲ್ಲಿಗೇ ಬಂದರು,
ಎಲ್ಲಿಗೆ ಬಂತೊ ಸಂಗಯ್ಯ?
ಯಥಾಸ್ಥಿತಿಯ ಮೂಲ ಪಲ್ಲವಿಗೆ-
ಬೇಡವೆಂದಲ್ಲ, ಪರಿಸ್ಥಿತಿ
ಹಾಗೆ ಇರಗೊಡುವದಿಲ್ಲ.

ಮುಂಬೈಯಲ್ಲಿ ಇದ್ದಕ್ಕಿದ್ದಂತೆ ಹುಂಬಗಾಳಿಯು ಬೀಸಿ
ಗಿರಣಿ ಬಂಬುಗಳು ವಿಪರೀತ ವಿಷಕಾರಿ
ವಾತಾವರಣ ಒಮ್ಮೆಲೆ ಕಲುಷಿತಗೊಂಡಾಗ-
ಉಸಿರ್ಗಟ್ಟಿ ಮುಂಬಾದೇವಿ ಒಳಗೊಳಗೆ ಚಡಪಡಿಸಿ
ಕತ್ತೆತ್ತಿ ಕುತುಬಮಿನಾರದ ಕಡೆಗೆ ನೋಡುತ್ತಾಳೆ.
ಲಾಲಬಾಗಿನ ಗಾಜಿನ ಮನೆಯ ಕನಸು ಕಾಣುತ್ತಾಳೆ.
ಬೃಂದಾವನದ ಕಾರಂಜಿಗಳ ನೆನೆದು
ಒಂಟಿ ಸೀನುತ್ತಾಳೆ.

'ಸಹ್ಯಾದ್ರಿ' ಯಲ್ಲಿ ಮರಮಳೆ ಹೊಡೆದು
ಹುಚ್ಚು ಹೊಳೆ ಬಂದಾಗ
ನಮ್ಮ ದಂಡೆಯ ಫಲವತ್ತಾದ ನೆಲವ ಕೊಚ್ಚುವದು
ಬಿತ್ತಿ ಬೆಳೆದದ್ದಕ್ಕೆ ಹೀಗೆ ಕೈಹಚ್ಚುವದು
ಕೊಡು-ಕೊಳೆಯ ರಹದಾರಿ ಸಂಕ-ಸೇತುವೆ
ಮುಳುಗಿ, ಹೆದ್ದಾರಿ ಕಟ್ಟಿ ಜೀವನ ಸ್ಥಗಿತ.
ಒಡೆದು ಕಿಟಕಿ-ಕನ್ನಡಿ ಹಾಳು ಮುಖದಲ್ಲಿ
ನಿಲ್ಲುವವು ದಾರಿ ತೋರದೆ ಲಾರಿ, ರೈಲು ಬಸ್ಸು.
ನಿಂತ ರೇವೆಯ ಮಣ್ಣ ರಾಡಿಯಲ್ಲಿ ಎಂತೆಂಥವರ ಕಾಲು

. ಜಾರುವದು
ಅರಸರವಸರದಲ್ಲಿ ದಿಲ್ಲಿಗೆ ವಿಮಾನ ಹಾರುವದು-
ಪ್ರಜೆಗಳ ತಲೆಯ ಮೇಲೆ
ಸುಂಕ ಹೇರುವದು.
(ಕೊಯನಾ ಸರೋವರವು ಯಥಾ ಪ್ರಕಾರ ನಡುಗುವದು)

ಅದಕಾಗಿ ಗಟ್ಟಿಮುಟ್ಟಾಗಿ ಇಟ್ಟು ಆಣೆ-
ಕಟ್ಟು, ಅಸ್ತವ್ಯಸ್ತ ಸ್ಥಿತಿಯ ಕೊನೆಗೊಳಿಸಿ, ಒಟ್ಟು
ಪ್ರಗತಿಗಡ್ಡಗಾಲು ಹಾಕದ ಹಾಗೆ
ಬೇರೆ ಕಾಲುವೆ ತೋಡಿ, ಎರಡೂ ಬದಿಯ
ಹೊಲ-ಗದ್ದೆಗಳ ಹಸುರು ಬಾಡದ ಹಾಗೆ,
ಕಾಡುಮಿಕ ನುಗ್ಗಿ ಕಬ್ಬಿನ ತೋಟ ಹಾಳು
ಮಾಡುವವರೆಗೆ ಕುಳ್ಳಿರದೆ, ಊರ ಬಣಿವೆಗೆ
ಹಬ್ಬದಂತೆ ಕಾಡಿನ ಬೇಗೆ, ನಮಗೆ
ಬೇಕಲ್ಲವೆ ಸರ್ವ (?) ಸಮ್ಮತವಾದ ಒಂದು
ಶಾಶ್ವತ ವ್ಯವಸ್ಥೆ ?



ಚೆನ್ನವೀರ ಕಣವಿಯವರು ಕನ್ನಡದ ಹಿರಿಯಕವಿಗಳ ಶ್ರೇಣಿಯಲ್ಲಿ ಅಗ್ರಗಣ್ಯರು. ಹೊಸಗನ್ನಡದ ಕಾವ್ಯಕ್ಷೇತ್ರದಲ್ಲಿ ಅವರ ಹೆಸರು ಎಂದೆಂದಿಗೂ ಹಸಿರು. ಕಣವಿಯವರು ಒಟ್ಟು ೧೬ ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ವಿದ್ಯಾ ವಿನಯ ಸಂಪನ್ನರಾದ ಕಣವಿಯವರು ಸರಳ ಜೀವಿ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಗೂ ಕವಿಗಳಿಗೂ ಬಹಳ ಕಾಲದ ನಂಟು. ಇಂಥ ಮಧುರ ಬಾಂಧವ್ಯದ ನೆನಪಿನೊಂದಿಗೆ ಈ ಕಾವ್ಯ ಸಂಪುಟಗಳು ಪ್ರಕಟವಾಗುತ್ತಿವೆ.

ಸಮನ್ವಯ ಮಾರ್ಗದ ದೃಷ್ಟಿಯಿಂದ ಕಣವಿಯವರ ಕಾವ್ಯ ಅನೇಕ ಕುತೂಹಲಕಾರಿ ಶೋಧನೆಗಳಿಗೆ ವಸ್ತುವಾಗಿದೆ. ರಮ್ಯ ಮತ್ತು ನವ್ಯ ಮಾರ್ಗಗಳೆರಡರ ಕೆಲವು ಅಂಶಗಳನ್ನು ತಮ್ಮ ಅಭಿವ್ಯಕ್ತಿಯಲ್ಲಿ ಅಳವಡಿಸಿಕೊಂಡಿರುವ ಅವರಿಗೆ ಎಲ್ಲಾ ಏರಿಳಿತಗಳೊಂದಿಗೆ ಕನ್ನಡ ಕಾವ್ಯ ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನವಿದೆ.........

ಈಗಾಗಲೆ ವಿಮರ್ಶಕರು ಗುರುತಿಸಿರುವಂತೆ ಸಾನೆಟ್ಟುಗಳು ಈ ಸಂಕಲನದ ವೈಶಿಷ್ಟ್ಯವಾಗಿವೆ. ಒಂದು ಜನಾಂಗ ತನ್ನ ಅಭಿವ್ಯಕ್ತಿಗಾಗಿ ನಿರ್ಮಿಸಿಕೊಂಡ ಒಂದು ಪ್ರಕಾರವೊಂದನ್ನು ಇನ್ನೊಂದು ಜನಾಂಗದ ಕವಿ ಅಳವಡಿಸಿಕೊಳ್ಳುವುದೇ ಸಾಹಸದ ಸಂಗತಿ. 'ಪು.ತಿ.ನ' ಈ ಸಂಕಲನದ ಅತ್ಯುತ್ತಮ ಸಾನೆಟ್. ಇದರ ಬಂಧ, ಪದಸಾಮರ್ಥ್ಯದ ವಿವಿಧ ವಿನ್ಯಾಸ, ಪು.ತಿ.ನ. ಕಾವ್ಯದ ಬಗೆಗಿನ ಗಾಢ ಅಭ್ಯಾಸ ಇವು ಈ ಕವನವನ್ನು ಶ್ರೇಷ್ಠತೆಗೆ ಏರಿಸಿವೆ.........

ಉಳಿದ ಪದ್ಯಗಳಲ್ಲಿ 'ಬೆಳ್ಳಿ ಹಬ್ಬದ ಮುಡಿಪು' ಉತ್ತಮವಾದುದ್ದು. ಸಮಕಾಲೀನ ಬದುಕಿನ ಕರಾಳತೆಯನ್ನು ಕವಿ ವಿಡಂಬಿಸುತ್ತ ಅದರ ಸಂಯಮದ ದುಃಖವನ್ನು ಕೂಡ ಪ್ರಕಟಿಸುತ್ತದೆ'.

– ಕಾಳೇಗೌಡ ನಾಗವಾರ

('ಸಾಹಿತ್ಯವಾರ್ಷಿಕ' ೧೯೭೪.)

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
೨. ರಮ್ಯ, ಗೋಕುಲ 3ನೇ ಹಂತ, ಮೈಸೂರು-೨